RNI: KARKAN\2019\78042



ಸಂಪಾದಕರು : ಸಿ.ಎನ್.ಸಮಗಂಡಿ.

# ಸತ್ಯಮಿಥ್ಯ

ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

Satyamithi Kannada Daily Morning

ಚನ್ನು ಮೆನ್ಸ್‌ವೇರ್
ಕೊಳ್ಳಿಯವರ ಕ್ರಾಸ್,
ಚನ್ನು ಸ್ಟಿಚ್‌ವರ್ಲ್ಡ್
ಬಿ.ಎಸ್.ಎನ್.ಎಲ್. ಆಫೀಸ್ ಹತ್ತಿರ,
ಜೆಂಟ್ಸ್ ಸ್ಪೇಶಲಿಷ್ಟ ಟೇಲರ್
ಗಜೇಂದ್ರಗಡ-582114.
ಸೆಲ್ : 9986982482, 9686165708

ರಾತ್ರೋರಾತ್ರಿ ಚನ್ನಮ್ಮ ಮೂರ್ತಿ ತೆರವಿಗೆ ಯತ್ನ: ಭುಗಿಲೆದ್ದ ಆಕ್ರೋಶ » 2

ಗದಗದಲ್ಲಿ ಪಂ. ಪುಟ್ಟರಾಜ ಗವಾಯಿಗಳ ಪುಣ್ಯಾರಾಧನೆ » 3

ರಕ್ತದಾನಕ್ಕೆ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಮುಂದಾಗಬೇಕು: ಡಾ. ಈಶ್ವರ ಹಸಬಿ » 4

ಸಂಪುಟ(Volume): 1 ಸಂಚಿಕೆ (Issue): 72 ● ಪುಟ (Page): 4 ● ದರ: Rs. 4 ಮಂಗಳವಾರ 22 ಸೆಪ್ಟೆಂಬರ್ 2026 ● 22 SEPTEMBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ

## ಕಸ್ತೂರಿ ರಂಗನ್ ವರದಿ ವಿರುದ್ಧ ಸದನದಲ್ಲಿ ಪಕ್ಷಾತೀತ ಆಕ್ರೋಶ: ರೈತರ ಹಿತರಕ್ಷಣೆಗೆ ಸಿಎಂ ಡಿ.ಕೆ. ಶಿವಕುಮಾರ್ ಬದ್ಧ

**ಸತ್ಯಮಿಥ್ಯ ನ್ಯೂಸ್ ಡೆಸ್ಕ್ ಬೆಂಗಳೂರು:**
ಕಸ್ತೂರಿ ರಂಗನ್ ವರದಿ ಜಾರಿ ವಿಚಾರ ಕರಾವಳಿ ಹಾಗೂ ಮಲೆನಾಡಿನ ಭಾಗದ ಜನರ ನಿದ್ದೆಗೆಡಿಸಿದ್ದು, ಈ ಭಾಗದಲ್ಲಿ ತೀವ್ರ ವಿರೋಧ, ಪ್ರತಿಭಟನೆ, ಹೋರಾಟ ಮತ್ತು ಬಂದ್ ವ್ಯಕ್ತವಾಗಿದೆ. ಈ ನಡುವೆ, ನಡೆಯುತ್ತಿರುವ ಮೂರು ದಿನಗಳ ವಿಶೇಷ ಅಧಿವೇಶನದಲ್ಲಿ ಕಸ್ತೂರಿ ರಂಗನ್ ವರದಿಗೆ ಪಕ್ಷಾತೀತವಾಗಿ ತೀವ್ರ ವಿರೋಧ ವ್ಯಕ್ತವಾಗಿದೆ. ಅಧಿವೇಶನದ ಕೊನೆಯ ದಿನ ಸರ್ಕಾರ ಕೇರಳ ಮಾದರಿಯಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳಲಿದೆಯೇ ಎಂಬ ಕುತೂಹಲ ಕೆರಳಿದ್ದು, ಈ ಕುರಿತು ಸಿಎಂ ಡಿ.ಕೆ. ಶಿವಕುಮಾರ್ ಹಾಗೂ ಅರಣ್ಯ ಸಚಿವ ರಾಮಲಿಂಗಾ ರೆಡ್ಡಿ ಸದನದಲ್ಲಿ ಸುಳಿವು ನೀಡಿದ್ದಾರೆ.

**ಸದನದಲ್ಲಿ ಯಾರು, ಏನು ಹೇಳಿದರು?: ಬೇಳೂರು ಗೋಪಾಲಕೃಷ್ಣ:**
"ಹಳ್ಳಿ ಪ್ರದೇಶದಲ್ಲಿ ರೈತರು ಸಂಕಷ್ಟದಲ್ಲಿದ್ದಾರೆ, ಜನರ ಭಯ ಹಾಗೂ ಆತಂಕ ತೀವ್ರವಾಗಿದೆ. ಮಲೆನಾಡಿನ ಜನರ ಬದುಕು ಮತ್ತು ಮಕ್ಕಳ ಭವಿಷ್ಯದ ರಕ್ಷಣೆಯ ನಿಟ್ಟಿನಲ್ಲಿ ಚರ್ಚೆ ಆಗಬೇಕಾಗಿದೆ. ರೈತರ ಜೀವನ ಉಳಿಯಬೇಕಾದರೆ ಮತ್ತೆ ಕಸ್ತೂರಿ ರಂಗನ್ ಕರಡು ಮಸೂದೆ ಬರಬಾರದು. ಕಾಡು, ಪರಿಸರ, ಜೀವ ವೈವಿಧ್ಯ ಉಳಿಯಬೇಕು, ಜೊತೆಗೆ ರೈತರ ಬದುಕು ಕೂಡ ಉಳಿಯಬೇಕಾಗಿದೆ."

**ಆರ್. ವಿ. ದೇಶಪಾಂಡೆ :** "ಕಸ್ತೂರಿ ರಂಗನ್ ಅವರು ಪಶ್ಚಿಮ ಘಟ್ಟಗಳ ಪ್ರದೇಶಕ್ಕೆ ಭೇಟಿ ನೀಡಿಲ್ಲ; ಬದಲಾಗಿ ಸ್ಯಾಟಲೈಟ್ ಮೂಲಕ ಸಮೀಕ್ಷೆ ಮಾಡಿದ್ದಾರೆ. ನೂರಾರು ವರ್ಷಗಳಿಂದ ಜನರು ಅಲ್ಲಿ ಅರಣ್ಯವಾಸಿಯಾಗಿ ಜೀವನ ಮಾಡುತ್ತಿದ್ದಾರೆ, ಅಷ್ಟು ವರ್ಷಗಳಿಂದ ಜೀವಿಸುತ್ತಿರುವ ಜನ ಎಲ್ಲಿಗೆ ಹೋಗಬೇಕು? ಅರಣ್ಯ ನಾಶ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಿ, ಆದರೆ ವಾಸ ಮಾಡುವ ಜನರ ಬಗ್ಗೆ ಚಿಂತನೆ ಮಾಡಿಲ್ಲ. ಸ್ಥಳಕ್ಕೆ ಹೋಗದೆ ಸಮೀಕ್ಷೆ ಮಾಡಿರುವುದರಿಂದ ಪಕ್ಷಾತೀತವಾಗಿ ಎಲ್ಲ ರಾಜಕೀಯ ಪಕ್ಷದವರು ವಿರೋಧ ಮಾಡುತ್ತಿರುವುದು ಅಭಿನಂದನೀಯ."

ಶಾರದಾ ಪೂರ್ಯ ನಾಯ್ಕ್ : "ಕಸ್ತೂರಿ ರಂಗನ್ ವರದಿ ಕೊಟ್ಟಿರುವ ಬಗ್ಗೆ ನಮ್ಮ ವಿರೋಧ ಎಂದಲ್ಲ, ಸ್ಯಾಟಲೈಟ್ ಮೂಲಕ ಸಮೀಕ್ಷೆ ಮಾಡಲಾಗಿದೆ ಎಂಬುದು ಸತ್ಯ. ಅದರಲ್ಲಿ ಶಿವಮೊಗ್ಗ ಜಿಲ್ಲೆ ಹೆಚ್ಚು ಸೇರಿಕೊಂಡಿದ್ದು, ನಮ್ಮಲ್ಲಿನ ಅಡಿಕೆ ತೋಟಗಳನ್ನು ನೋಡಿ ಅರಣ್ಯ ಎಂದು ಸಮೀಕ್ಷೆ ಮಾಡಿರುವ ಸಾಧ್ಯತೆ ಇದೆ. ಹೀಗಾಗಿ ಈ ವರದಿಯನ್ನು ಮರು ಪರಿಶೀಲನೆ ಮಾಡಬೇಕು."

### ರೈತರ ರಕ್ಷಣೆಗೆ ಸರ್ಕಾರ ಬದ್ಧ: ಸಿಎಂ ಡಿ.ಕೆ.ಶಿ

ಚರ್ಚೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, "ರಾಜ್ಯದ ರೈತರು ಹಾಗೂ ಜನರ ರಕ್ಷಣೆ ನನಗೆ ಮುಖ್ಯವಾಗಿದ್ದು, ಅದಕ್ಕೆ ನಾನು ಬದ್ಧನಾಗಿದ್ದೇನೆ. ದೊರೆತಿರುವ ಈ ಅವಕಾಶವನ್ನು ಬಳಸಿಕೊಂಡು ಎಲ್ಲರನ್ನೂ ರಕ್ಷಣೆ ಮಾಡಬೇಕು, ಸಮಸ್ಯೆಗಳನ್ನು ಇಟ್ಟುಕೊಂಡು ರಾಜಕಾರಣ ಮಾಡುವ ಉದ್ದೇಶ ನನಗಿಲ್ಲ," ಎಂದು ಸ್ಪಷ್ಟಪಡಿಸಿದರು. "ಕಸ್ತೂರಿ ರಂಗನ್ ವರದಿ ಪರಿಣಾಮ, ನಾಡಿನ ರೈತರ ಸ್ಥಿತಿ ಹಾಗೂ ಬರದ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಈ 3 ದಿನಗಳ ಅಧಿವೇಶನ ಕರೆಯಲಾಗಿದೆ. ನಾವು ನಿಂತಿರುವ ಈ ಭೂಮಿಯನ್ನು ಬಿಟ್ಟುಕೊಡುವ ಮಾತೇ ಇಲ್ಲ. ರೈತರ ಬದುಕಿನ ಹಕ್ಕು, ಜನರ ಆಕ್ರೋಶ ಮತ್ತು ಸ್ವಾಭಿಮಾನವನ್ನು ನಾನು ಅರಿತಿದ್ದೇನೆ. ಈ ಕುರಿತು ಸಂಸತ್ ಸದಸ್ಯರು, ಶಾಸಕರು ಹಾಗೂ ರೈತ ಪ್ರತಿನಿಧಿಗಳೊಂದಿಗೆ ಮುಕ್ತವಾಗಿ ಚರ್ಚಿಸಿದ್ದು, ಸಾವಿರಾರು ಜನರು ಅರ್ಜಿಗಳನ್ನು ಕೊಟ್ಟಿದ್ದಾರೆ," ಎಂದು ಅಭಯ ನೀಡಿದರು.





## ಸೋನಿಯಾ ಗಾಂಧಿ ಮತದಾರರ ಪಟ್ಟಿ ವಿವಾದ

### ದೆಹಲಿ ಕೋರ್ಟ್‌ನಿಂದ ಸಿಆರ್‌ಪಿಸಿ ರದ್ದು, ಮರು ವಿಚಾರಣೆಗೆ ಆದೇಶ

**ಸತ್ಯಮಿಥ್ಯ ನ್ಯೂಸ್ ಡೆಸ್ಕ್ ಬೆಂಗಳೂರು:**
ಭಾರತೀಯ ಪೌರತ್ವ ಪಡೆಯುವ ಮೂರು ವರ್ಷಗಳ ಮುನ್ನವೇ ನಕಲಿ ದಾಖಲೆಗಳನ್ನು ಬಳಸಿ ಮತದಾರರ ಪಟ್ಟಿಗೆ ಹೆಸರು ಸೇರಿಸಲಾಗಿದೆ ಎಂಬ ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕಿ ಸೋನಿಯಾಗಾಂಧಿ ವಿರುದ್ಧದ ದೂರಿಗೆ ದೆಹಲಿ ನ್ಯಾಯಾಲಯದಲ್ಲಿ ಮರುಜೀವ ಬಂದಿದೆ. ಎಫ್‌ಐಆರ್ ದಾಖಲಿಸಲು ನಿರಾಕರಿಸಿ ಮ್ಯಾಜಿಸ್ಟ್ರೇಟ್ ಕೋರ್ಟ್ ನೀಡಿದ್ದ ಆದೇಶವನ್ನು ರದ್ದುಗೊಳಿಸಿರುವ ವಿಶೇಷ ನ್ಯಾಯಾಲಯವು, ಪೊಲೀಸರಿಂದ ಸ್ಥಿತಿಗತಿ ವರದಿ ಪಡೆಯದೆ ಹೊರಡಿಸಲಾದ ಆದೇಶವು ಕಾನೂನು ದೋಷಗಳಿಂದ ಕೂಡಿದೆ ಎಂದು ಆಕ್ಷೇಪಿಸಿದೆ. ಅಲ್ಲದೆ, ಸೆಪ್ಟೆಂಬರ್ 29 ರಿಂದ ಪ್ರಕರಣವನ್ನು ಹೊಸದಾಗಿ ವಿಚಾರಣೆ ನಡೆಸುವಂತೆ ಎಸಿಜೆಎಂ ನ್ಯಾಯಾಲಯಕ್ಕೆ ಸೂಚನೆ ನೀಡಿದೆ.

1980 ರ ದಶಕದ ಈ ವಿವಾದದಲ್ಲಿ ದೆಹಲಿ ವಿಶೇಷ ನ್ಯಾಯಾಲಯದಿಂದ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರಿಗೆ ಹಿನ್ನಡೆಯಾಗಿದ್ದು, ಈ ಹಿಂದೆ ಯಾವುದೇ ವಿವರಣೆ ಇಲ್ಲದೆ ಅರ್ಜಿಯನ್ನು ವಜಾಗೊಳಿಸಿದ್ದ ಮ್ಯಾಜಿಸ್ಟ್ರೇಟ್ ಆದೇಶ ರದ್ದಾಗಿದೆ. ಎರಡೂ ಕಡೆಯ ವಾದಗಳನ್ನು ಹಾಗೂ ಪೊಲೀಸರ ಹೇಳಿಕೆಗಳನ್ನು ಕೂಲಂಕಷವಾಗಿ ಆಲಿಸಿ ಸೂಕ್ತ ನಿರ್ಧಾರ ಕೈಗೊಳ್ಳುವಂತೆ ಕೆಳ ನ್ಯಾಯಾಲಯಕ್ಕೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ.

**ವಿವಾದದ ಹಿನ್ನೆಲೆ ಮತ್ತು ದೂರುದಾರರ ಆರೋಪ:** ವಕೀಲ ವಿಕಾಸ್ ತ್ರಿಪಾಠಿ ಸಲ್ಲಿಸಿರುವ ಅರ್ಜಿಯ ಪ್ರಕಾರ, ಇಟಲಿ ಮೂಲದ ಸೋನಿಯಾ ಗಾಂಧಿ ಅವರು 1968 ರಲ್ಲಿ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರನ್ನು ವಿವಾಹವಾಗಿದ್ದು, 1983 ರ ಏಪ್ರಿಲ್‌ನಲ್ಲಿ ಅಧಿಕೃತವಾಗಿ ಭಾರತೀಯ ಪೌರತ್ವ ಪಡೆದುಕೊಂಡಿದ್ದರು. ಆದರೆ ಪೌರತ್ವ ಸಿಗುವ ಮೂರು ವರ್ಷಗಳ ಮುನ್ನವೇ, ಅಂದರೆ 1980 ರ ನವದೆಹಲಿ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಅವರ ಹೆಸರಿತ್ತು. ಬಳಿಕ 1982 ರಲ್ಲಿ ಈ ಹೆಸರನ್ನು ಕೈಬಿಟ್ಟು, 1983 ರಲ್ಲಿ ಮತ್ತೆ ಸೇರಿಸಲಾಗಿತ್ತು.

ಭಾರತದ ನಾಗರಿಕರಲ್ಲದಿದ್ದರೂ ನಕಲಿ ದಾಖಲೆ ಸೃಷ್ಟಿಸಿ ಮತದಾರರ ಪಟ್ಟಿಗೆ ಸೇರ್ಪಡೆಗೊಂಡ ಆರೋಪದಡಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ದೂರುದಾರರು ಒತ್ತಾಯಿಸಿದ್ದಾರೆ.

**ನ್ಯಾಯಾಲಯದ ಪ್ರಮುಖ ವೀಕ್ಷಣೆ:** ದೆಹಲಿ ಪೊಲೀಸರಿಂದ ಪ್ರಕರಣದ ಸ್ಥಿತಿಗತಿ ವರದಿ ಪಡೆಯದೆ ಮತ್ತು ದೂರಿನಲ್ಲಿರುವ ನಕಲಿ ದಾಖಲೆ ಸೃಷ್ಟಿಯ ಗಂಭೀರ ಆರೋಪಗಳನ್ನು ಸಮಗ್ರವಾಗಿ ಪರಿಶೀಲಿಸದೆ ಮ್ಯಾಜಿಸ್ಟ್ರೇಟ್ ಆದೇಶ ಹೊರಡಿಸಿದ್ದು ಕಾನೂನಿನ ಸ್ಪಷ್ಟ ದೋಷ ಎಂದು ಸೆಷನ್ಸ್ ಕೋರ್ಟ್ ಹೇಳಿದೆ.

ಮತದಾರರ ಪಟ್ಟಿಗೆ ಸಂಬಂಧಿಸಿದ ಆಕ್ಷೇಪಣೆಗಳನ್ನು ಜನಪ್ರತಿನಿಧಿ ಕಾಯ್ದೆ ಅನ್ವಯ ಭಾರತೀಯ ಚುನಾವಣಾ ಆಯೋಗವೇ ನಿರ್ಧರಿಸಬೇಕು ಮತ್ತು ಕ್ರಿಮಿನಲ್ ನ್ಯಾಯಾಲಯಗಳು ನೇರವಾಗಿ ಮಧ್ಯಪ್ರವೇಶಿಸಲು ಸಾಧ್ಯವಿಲ್ಲ ಎಂಬ ಆಧಾರದಲ್ಲಿ ಈ ಹಿಂದೆ ಮ್ಯಾಜಿಸ್ಟ್ರೇಟ್ ಅರ್ಜಿಯನ್ನು ತಿರಸ್ಕರಿಸಿದ್ದರು. ಆದರೆ, 'ನಕಲಿ ದಾಖಲೆ ಸೃಷ್ಟಿ' ಎಂಬುದು ಭಾರತೀಯ ದಂಡ ಸಂಹಿತೆಯಡಿ ಅಪರಾಧವಾಗಿರುವುದರಿಂದ ನ್ಯಾಯಾಲಯವು ಅದರ ತನಿಖೆಯನ್ನು ಕಡೆಗಣಿಸುವಂತಿಲ್ಲ ಎಂದು ಸೆಷನ್ಸ್ ಕೋರ್ಟ್ ಅಭಿಪ್ರಾಯಪಟ್ಟಿದೆ.



### ಸೆಪ್ಟೆಂಬರ್ 29ಕ್ಕೆ ಮರು ವಿಚಾರಣೆ

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿ ಎನ್ ಎಸ್ ಎಸ್ ) ಸೆಕ್ಷನ್ 175(3) ಅಡಿಯಲ್ಲಿ ಮ್ಯಾಜಿಸ್ಟ್ರೇಟ್ ಮಾತ್ರ ಎಫ್‌ಐಆರ್ ಆದೇಶವನ್ನು ಪರಿಗಣಿಸಲು ಸಾಧ್ಯವಿರುವುದರಿಂದ, ಪೊಲೀಸರ ಹಾಗೂ ಎರಡೂ ಕಡೆಯ ವಾದಗಳನ್ನು ಆಲಿಸಿ ವಿವರವಾದ ತೀರ್ಪು ನೀಡುವಂತೆ ಎಸಿಜೆಎಂ ನ್ಯಾಯಾಲಯಕ್ಕೆ ಪ್ರಕರಣದ ಕಡತವನ್ನು ಹಿಂತಿರುಗಿಸಲಾಗಿದೆ. ಮುಂಬರುವ ಮಹತ್ವದ ಚುನಾವಣೆಗಳ ಹೊಸ್ತಿಲಿನಲ್ಲಿ ಗಾಂಧಿ ಕುಟುಂಬದ ವಿರುದ್ಧದ ಈ ಹಳೆಯ ವಿವಾದ ಮತ್ತೆ ಕೋರ್ಟ್ ಅಂಗಳದಲ್ಲಿ ಜೀವ ಪಡೆದಿರುವುದು ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಹೊಸ ರಾಜಕೀಯ ವಾಕ್ಸಮರಕ್ಕೆ ನಾಂದಿ ಹಾಡುವ ಸಾಧ್ಯತೆಯಿದೆ.

## ಅ. 10ರೊಳಗೆ ನಿರ್ಧಾರವಾಗದಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಎಚ್ಚರಿಕೆ!

**ಸತ್ಯಮಿಥ್ಯ ಸುದ್ದಿಮೂಲ ಗದಗ:**
ಗದಗ ತಾಲೂಕನ್ನು ಅಕ್ಟೋಬರ್ 10ರೊಳಗಾಗಿ ಬರಪೀಡಿತ ಪ್ರದೇಶವೆಂದು ಸರ್ಕಾರ ಘೋಷಿಸದಿದ್ದರೆ ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಮಾಜಿ ಸಚಿವ ಹಾಗೂ ಹಿರಿಯ ಶಾಸಕ ಎಚ್.ಕೆ. ಪಾಟೀಲ್ ತಮ್ಮದೇ ಸರ್ಕಾರದ ವಿರುದ್ಧ ಸಂಚಲನ ಮೂಡಿಸುವ ಎಚ್ಚರಿಕೆ ನೀಡಿದ್ದಾರೆ.

ಮುಳಗುಂದ ಪಟ್ಟಣದ ಬಳಿ ಕಾರವಾರ-ಕೈಗಾ ಹಾಗೂ ಗದಗ-ಇಳಕಲ್ ರಾಜ್ಯ ಹೆದ್ದಾರಿ ತಡೆದು ರೈತರು ನಡೆಸುತ್ತಿದ್ದ ಬೃಹತ್ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ರೈತರ ಹೋರಾಟಕ್ಕೆ ಸಂಪೂರ್ಣ ಬೆಂಬಲ ಸೂಚಿಸಿದರು.

> **ಗದಗ ತಾಲೂಕು ಬರ ಘೋಷಣೆಗೆ ಮಾಜಿ ಸಚಿವ ಎಚ್.ಕೆ. ಪಾಟೀಲ್ ಕಟ್ಟುನಿಟ್ಟಿನ ಗಡುವು**

**ಸಭೆ, ಸಿಎಂ ಭೇಟಿಯಾದರೂ ನಿರ್ಲಕ್ಷ್ಯ:** "ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರ ಸಭೆಯಲ್ಲಿ ಗದಗ ತಾಲೂಕಿನ ಭೀಕರ ಸ್ಥಿತಿಯ ಸ್ಪಷ್ಟ ಚಿತ್ರಣವಿತ್ತು. ಸ್ವತಃ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೇ ಕ'ದಾಂಪೂರ'ದಿಂದ' ಕುರ್ತಕೋಟಿವರೆಗೆ ಬೆಳೆ ಹಾನಿ ವೀಕ್ಷಿಸಿ ಹೋಗಿದ್ದರು. ಗದಗದಲ್ಲಿ ಶೇ. 49ರಷ್ಟು ಮಳೆ ಅಭಾವವಿದ್ದು, ಶೇ. 86ರಷ್ಟು ಬೆಳೆ ನಷ್ಟವಾಗಿದೆ. ಇಷ್ಟಾದರೂ ಬರಪೀಡಿತ ಪಟ್ಟಿಯಿಂದ ತಾಲೂಕನ್ನು ಕೈಬಿಟ್ಟಿರುವುದು ಅನ್ಯಾಯ. ಇದನ್ನು ಸಹಿಸಲು ಸಾಧ್ಯವಿಲ್ಲ. ಬರ ಘೋಷಣೆಗೆ ಅಡ್ಡಿಪಡಿಸುತ್ತಿರುವವರು ಯಾರು?" ಎಂದು ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

**ಉತ್ತರ ಕರ್ನಾಟಕದ 27 ತಾಲೂಕುಗಳಿಗೆ ಅನ್ಯಾಯ:** "ಉತ್ತರ ಕರ್ನಾಟಕದ 73 ತಾಲೂಕುಗಳ ಪೈಕಿ 27 ತಾಲೂಕುಗಳನ್ನು ಬರ ಪಟ್ಟಿಯಿಂದ ಹೊರಗಿಡಲಾಗಿದೆ. ಈ ಎಲ್ಲ ತಾಲೂಕುಗಳನ್ನು ತಕ್ಷಣವೇ ಪಟ್ಟಿಗೆ ಸೇರಿಸಬೇಕು. ಇದರಲ್ಲಿ ಯಾವುದೇ ಅನಗತ್ಯ ರಾಜಕೀಯ ಬೆರೆಸಬಾರದು," ಎಂದು ಖಡಕ್ಕಾಗಿ ನುಡಿದರು.

**ಸಿಎಂಗೆ 3 ಪುಟಗಳ ಸುದೀರ್ಘ ಪತ್ರ:** ನೈರುತ್ಯ ಮುಂಗಾರು ವೈಫಲ್ಯ ಹಾಗೂ 'ಸೂಪರ್ ಎಲ್ ನಿನೋ' ಪರಿಣಾಮದಿಂದ ಹೆಸರು, ಶೇಂಗಾ, ಹತ್ತಿ, ಈರುಳ್ಳಿ ಬೆಳೆಗಳು ಸಂಪೂರ್ಣ ನಾಶವಾಗಿವೆ ಎಂದು ವಿವರಿಸಿ ಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಎಚ್.ಕೆ. ಪಾಟೀಲ್ ಮೂರು ಪುಟಗಳ ಪತ್ರ ಬರೆದಿದ್ದಾರೆ.

ರೈತನ ಮಗನಾಗಿ ನಾನು ಅವರ ಸಂಕಟ ಬಲ್ಲೆ ಎಂದ ಅವರು, "ಮುಂದಿನ ಮೂರು ದಿನಗಳಲ್ಲಿ ಬರ ಘೋಷಣೆಗೆ ಸರ್ಕಾರದ ಮಟ್ಟದಲ್ಲಿ ಸಕಲ ಪ್ರಯತ್ನ ನಡೆಸುತ್ತೇನೆ. ಅದು ಫಲಿಸದಿದ್ದರೆ ಅಕ್ಟೋಬರ್ 10ರೊಳಗೆ ಶಾಸನ ಸಭೆಯ ಮೂಲಕವೇ ಅಂತಿಮ ಗಡುವು ನೀಡಿ, ಅಗತ್ಯ ಬಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ" ಎಂದು ಪುನರುಚ್ಚರಿಸಿದರು.



## ವಾಕರಸಾ ಸಂಸ್ಥೆಯ ಎಂಡಿ ಆಗಿ ವೈಶಾಲಿ ಅಧಿಕಾರ ಸ್ವೀಕಾರ

**ಸತ್ಯಮಿಥ್ಯ ಸುದ್ದಿಮೂಲ ಗದಗ :**
ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ನೂತನ ವ್ಯವಸ್ಥಾಪಕ ನಿರ್ದೇಶಕರಾಗಿ ಶ್ರೀಮತಿ ವೈಶಾಲಿ ಎಂ.ಎಲ್., ಭಾ.ಆ.ಸೇ. ರವರು ದಿನಾಂಕ: 18-09-2026ರಂದು ಅಧಿಕಾರ ವಹಿಸಿಕೊಂಡರು. ಶ್ರೀಮತಿ ವೈಶಾಲಿ ಎಂ.ಎಲ್. ರವರು 2013ನೇ ಕರ್ನಾಟಕ ಬ್ಯಾಚ್ನ ಭಾರತೀಯ ಆಡಳಿತ ಸೇವೆಯ ಅಧಿಕಾರಿಯಾಗಿದ್ದು, ಪ್ರಸ್ತುತ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ದ ವ್ಯವಸ್ಥಾಪಕ ನಿರ್ದೇಶಕರಾಗಿ ಕೂಡ ಸೇವೆ ಸಲ್ಲಿಸುತ್ತಿದ್ದಾರೆ. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿರುವ ಅವರು ದಿನಾಂಕ:19-09-2026ರಂದು ಸಂಸ್ಥೆಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ಜರುಗಿಸಿ, ಸಾರಿಗೆ ಸಂಸ್ಥೆಯ ಕಾರ್ಯಾಚರಣೆ, ಸಾರ್ವಜನಿಕ ಸಾರಿಗೆ ಸೇವೆಗಳ ಸುಧಾರಣೆ ಹಾಗೂ ಪ್ರಯಾಣಿಕರಿಗೆ ಉತ್ತಮ ಗುಣಮಟ್ಟದ ಸೇವೆ ಒದಗಿಸುವ ನಿಟ್ಟಿನಲ್ಲಿ ಸಂಸ್ಥೆಯ ಶ್ರೇಯಾಭಿವೃದ್ಧಿಗಾಗಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಲು ತಿಳಿಸಿದರು.




## ಬರ ಘೋಷಣೆಗೆ ಆಗ್ರಹ: ಮುಖ್ಯಮಂತ್ರಿಗೆ ಸಚಿವ ರಾಯರಡ್ಡಿ, ಶಾಸಕ ಎಚ್.ಕೆ. ಪಾಟೀಲ ಪತ್ರ

**ಸತ್ಯಮಿಥ್ಯ ಸುದ್ದಿಮೂಲ ಗದಗ:**
ರೋಣ, ಗದಗ, ಮುಂಡರಗಿ ತಾಲ್ಲೂಕುಗಳನ್ನು ಬತಪೀಡಿತ ಪ್ರದೇಶಗಳೆಂದು ತಕ್ಷಣ ಘೋಷಿಸುವಂತೆ ಆಗ್ರಹಿಸಿ ಜಿಲ್ಲಾ ಉಸ್ತುವಾರಿ ಸಚಿವ ಬಸವರಾಜ ರಾಯರಡ್ಡಿ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರದ ಮೂಲಕ ಒತ್ತಾಯಿಸಿದ್ದಾರೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಮಳೆಯ ಪ್ರಮಾಣದ ವರದಿ, ಬರ ಪರಿಸ್ಥಿತಿ ಕುರಿತು ಜಿಲ್ಲಾಡಳಿತ ಸಲ್ಲಿಸಿದ ಪ್ರಸ್ತಾವ, ಮುಖ್ಯಮಂತ್ರಿ ಅವರೇ ಖುದ್ದು ಬರ ಹಾಗೂ ಬೆಳೆಯ ಸ್ಥಿತಿಗತಿ ಪರಿಶೀಲಿಸಿದ್ದರ ಆಧಾರದ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈ ಎಲ್ಲ ವಾಸ್ತವಾಂಶ ಹಾಗೂ ರೈತರ ಸಂಕಷ್ಟದ ನಡುವೆಯೂ ಮೂರು ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸುವ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ. ಇದು ನನಗೆ ತೀವ್ರ ಅಸಮಾಧಾನ ಉಂಟುಮಾಡಿದೆ ಎಂದೂ ತಿಳಿಸಿದ್ದಾರೆ.

ಗದಗ ತಾಲ್ಲೂಕು ಸೇರಿದಂತೆ ಉತ್ತರ ಕರ್ನಾಟಕದ 27 ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಲು ಆಗ್ರಹಿಸಿ ಶಾಸಕ ಎಚ್.ಕೆ. ಪಾಟೀಲ ಅವರು ಸಹ ಪತ್ರದ ಮೂಲಕ ಮುಖ್ಯಮಂತ್ರಿ ಅವರನ್ನು ಒತ್ತಾಯಿಸಿದ್ದಾರೆ.



ಸತ್ಯ ಮಿಥ್ಯ
SATYA MITHI
Kannada Daily Morning

# ರಾತ್ರೋರಾತ್ರಿ ಚನ್ನಮ್ಮ ಮೂರ್ತಿ ತೆರವಿಗೆ ಯತ್ನ: ಭುಗಿಲೆದ್ದ ಆಕ್ರೋಶ, ಅಧಿಕಾರಿಗಳ ವಿರುದ್ಧ ರಸ್ತೆಗಿಳಿದು ಬೃಹತ್ ಪ್ರತಿಭಟನೆ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ನಗರದ ಕುಷ್ಟಗಿ ರಸ್ತೆಯಲ್ಲಿರುವ ರಾಣಿ ಚನ್ನಮ್ಮ ವೃತ್ತದಲ್ಲಿ ಲೋಕಾರ್ಪಣೆಗೆಸಿದ್ಧವಾಗಿದ್ದಚನ್ನಮ್ಮನಮೂರ್ತಿಯನ್ನುರಾತ್ರೋರಾತ್ರಿ ತೆರವುಗೊಳಿಸಲು ಮುಂದಾದ ಅಧಿಕಾರಿಗಳ ವಿರುದ್ಧ ಸಾರ್ವಜನಿಕರು ಹಾಗೂ ವಿವಿಧ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ. ಭಾನುವಾರ ಬೆಳಿಗ್ಗೆಯಿಂದಲೇ ಸ್ಥಳೀಯ ನಿವಾಸಿಗಳು, ಕನ್ನಡಪರ ಸಂಘಟನೆಗಳು ಹಾಗೂ ವಿವಿಧ ಸಮಾಜಗಳ ಮುಖಂಡರು ರಾಣಿ ಚನ್ನಮ್ಮ ವೃತ್ತದಲ್ಲಿ ಬೃಹತ್ ಧರಣಿ ನಡೆಸಿದರು.

**ನಸುಕಿನ 3 ಗಂಟೆಗೆ ಸಿಸಿಟಿವಿ ಆಫ್ ಮಾಡಿ ತೆರವು ಯತ್ನ!:** ಕಂದಾಯ ಇಲಾಖೆ, ಪುರಸಭೆ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಭಾನುವಾರ ನಸುಕಿನ 3 ಗಂಟೆಯ ಸುಮಾರಿಗೆ ವೃತ್ತದ ಸುತ್ತಲಿನ ಸಿಸಿಟಿವಿ ಕ್ಯಾಮೆರಾ ಹಾಗೂ ದೀಪಗಳನ್ನು ಬಂದ್ ಮಾಡಿಸಿ ಏಕಾಏಕಿ ಮೂರ್ತಿ ತೆರವಿಗೆ ಮುಂದಾಗಿದ್ದರು. ಇದನ್ನು ಗಮನಿಸಿದ ಸ್ಥಳೀಯರು ಹಾಗೂ ಕನ್ನಡಪರ ಸಂಘಟನೆಗಳ ಮುಖಂಡರು ತಕ್ಷಣ ಸ್ಥಳಕ್ಕೆ ಧಾವಿಸಿ ತೆರವು ಕಾರ್ಯವನ್ನು ತಡೆದರು. ಪ್ರತಿಭಟನೆ ಕಾವು ಪಡೆಯುತ್ತಿದ್ದಂತೆ ಅಧಿಕಾರಿಗಳು ಪುರಸಭೆಯ ಟ್ರ್ಯಾಕ್ಟರ್ ಹಾಗೂ ಸಿಮೆಂಟ್ ಒಡೆಯುವ ಯಂತ್ರಗಳನ್ನು ಸ್ಥಳದಲ್ಲೇ ಬಿಟ್ಟು ಕಾಲ್ಕಿತ್ತರು. ವಿಷಯ ತಿಳಿಯುತ್ತಿದ್ದಂತೆ ಪಂಚಮಸಾಲಿ ಸಮುದಾಯ ಸೇರಿದಂತೆ ಹಲವು ಸಮಾಜಗಳ ಮುಖಂಡರು ಸ್ಥಳಕ್ಕೆ ಆಗಮಿಸಿ ಧರಣಿ ಕುಳಿತರು.

ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಮೂರ್ತಿ ತೆರವಿಗೆ ಕಾರಣಗಳನ್ನು ತಿಳಿಸುವುದರ ಜೊತೆಗೆ ಬಹಿರಂಗ ಕ್ಷಮಾಪಣೆ ಕೇಳಬೇಕು ಮತ್ತು ತಪ್ಪಿತಸ್ಥ ಅಧಿಕಾರಿಗಳನ್ನು ಕೂಡಲೇ ಅಮಾನತುಗೊಳಿಸಬೇಕು ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಮಾಜಿ ಸಚಿವ ಕಳಕಪ್ಪ ಬಂಡಿ ಮಾತನಾಡಿ. "ಜನತಾ ಪ್ಲಾಟ್‌ನಲ್ಲಿರುವ ಈ ವೃತ್ತ 40 ವರ್ಷಗಳಿಂದ ರಾಣಿ ಚನ್ನಮ್ಮ ವೃತ್ತವೆಂದೇ ಪ್ರಸಿದ್ಧಿಯಾಗಿದೆ. ಇದನ್ನು ಯಾವುದೇ ಶಾಸಕ ಅಥವಾ ಸಚಿವರು ಉದ್ಘಾಟಿಸಿಲ್ಲ, ಬದಲಿಗೆ ಇಲ್ಲಿನ ಬಡಾವಣೆಯ ಎಲ್ಲಾ ಸಮುದಾಯಗಳ ಬಡ ಜನರು ಸ್ಥಾಪಿಸಿದ್ದಾರೆ. ಪುರಸಭೆ ಮುಖ್ಯಾಧಿಕಾರಿ, ತಹಶೀಲ್ದಾರ್ ಹಾಗೂ ಪಿಎಸ್‌ಐ ಅವರು ಮೇಲಧಿಕಾರಿಗಳ ಗಮನಕ್ಕೆ ತರದೆ ಸ್ವಾತಂತ್ರ್ಯಹೋರಾಟಗಾರ್ತಿಯ ಮೂರ್ತಿ ತೆರವಿಗೆ ಮುಂದಾಗಿದ್ದು ಮೂರ್ಖತನದ ಪರಮಾವಧಿ. ಮೇಲಧಿಕಾರಿಗಳು ಸ್ಥಳಕ್ಕೆ ಆಗಮಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು

ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಪ್ರಭು ಚವಡಿ ಮಾತನಾಡಿ. "ನಾಲ್ಕು ದಶಕಗಳ ಹಿಂದೆ ಜನತಾ ಪ್ಲಾಟಿನ ಎಲ್ಲಾ ಸಮಾಜದ ಜನರು ಸ್ವಂತ ಖರ್ಚಿನಲ್ಲಿ ಈ ವೃತ್ತ ಸ್ಥಾಪಿಸಿದ್ದರು. ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ವೇಳೆ ವೃತ್ತ ತೆರವುಗೊಳಿಸಿ, ಕಾಮಗಾರಿ ಮುಗಿದ ಬಳಿಕ ಕಟ್ಟಿಕೊಡುವುದಾಗಿ ಹೆದ್ದಾರಿ ಪ್ರಾಧಿಕಾರ ಭರವಸೆ ನೀಡಿತ್ತು. ಅದರಂತೆ ನಿರ್ಮಿಸಲಾದ ಕಟ್ಟೆಯ ಮೇಲೆ 15 ದಿನಗಳ ಹಿಂದೆ ಮೂರ್ತಿ ಪ್ರತಿಷ್ಠಾಪಿಸಿ, ಅದ್ದೂರಿಯಾಗಿ ಅನಾವರಣಗೊಳಿಸಲು ಯೋಜನೆ ರೂಪಿಸಲಾಗಿತ್ತು. ಶನಿವಾರ ಸಂಜೆ ಸಭೆ ಕರೆದಿದ್ದ ಅಧಿಕಾರಿಗಳಿಗೆ ಸ್ಥಳೀಯ ಶಾಸಕರಾದ ಜಿ.ಎಸ್.ಪಾಟೀಲ ಹಾಗೂ ಮಾಜಿ ಸಚಿವರಾದ ಕಳಕಪ್ಪ ಬಂಡಿ ಅವರು ಊರಲಿಲ್ಲದ ಕಾರಣ ಕಾಲಾವಕಾಶ ಕೇಳಿದ್ದೆವು. ಆದರೂ ರಾತ್ರೋರಾತ್ರಿ ತೆರವಿಗೆ ಮುಂದಾಗಿದ್ದು ಖಂಡನೀಯ. ಅಧಿಕಾರಿಗಳಿಗೆ ಒತ್ತಡ ಹೇರಿದವರು ಯಾರು ಎಂಬುದನ್ನು ಬಹಿರಂಗಪಡಿಸಬೇಕು ಎಂದು ಒತ್ತಾಯಿಸಿದರು.



ಕರ್ನಾಟಕ ಅಭಿವೃದ್ಧಿ ವೇದಿಕೆ ರಾಜ್ಯಾಧ್ಯಕ್ಷ ವಿನಾಯಕ ಜರತಾರಿ ಮಾತನಾಡಿ. ಶುಶಿಕ್ಷಿತ ಅಧಿಕಾರಿಗಳಾದವರು ರಾತ್ರೋರಾತ್ರಿ ಬಂದು ವೃತ್ತದಲ್ಲಿರುವ ಸಿಸಿ ಕ್ಯಾಮರಗಳನ್ನು ಲೈಟ್ಗಳನ್ನು ಬಂದ್ ಮಾಡಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರರಾಣಿ ಕಿತ್ತೂರು ಚೆನ್ನಮ್ಮಾಜೀಯವರ ಮೂರ್ತಿಯನ್ನು ತೆರವುಗೊಳಿಸಲು ಬಂದದ್ದು ನ್ಯಾಯವೇ? ಇದನ್ನೂ ಪ್ರಶ್ನೆಮಾಡಿದ ನಮಗೆ ಅಧಿಕಾರಿಗಳು ಹುಶಾರ್ ಆಗಿರು ಎಂದು ಎಚ್ಚರಿಕೆ ನೀಡುತ್ತಾರೆ. ಆದ್ದರಿಂದ ಈ ಪ್ರಕರಣದಲ್ಲಿ ಭಾಗಿಯಾದ ತಹಸೀಲ್ದಾರ್, ಪುರಸಭೆಮುಖ್ಯಾಧಿಕಾರಿಮತ್ತುಪಿಎ□□□ಮೂರುಜನಅಧಿಕಾರಿಗಳನ್ನು ಅಮಾನತ್ತು ಗೊಳಿಸಬೇಕು ಇಲ್ಲವಾದರೆ ನಮ್ಮ ಸಂಘಟನೆಯಿಂದ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

**ಸ್ಥಳಕ್ಕೆ ಭೇಟಿ ನೀಡಿದ ಅಧಿಕಾರಿಗಳು: ಶೋಕಾಸ್ ನೋಟಿಸ್ ಮತ್ತು ವಿಷಾದ:** ಧರಣಿ ಸ್ಥಳಕ್ಕೆ ಉಪ ವಿಭಾಗಾಧಿಕಾರಿ ಎಂ. ಗಂಗಪ್ಪ, ಡಿವೈಎಸ್ಪಿ ಪ್ರಭುಗೌಡ ಕಿರೇದಳ್ಳಿ ಹಾಗೂ ಸಿಪಿಐ ಪ್ರವೀಣಕುಮಾರ ಭೇಟಿ ನೀಡಿ ಪ್ರತಿಭಟನಾಕಾರರ ಮನವಿ ಆಲಿಸಿದರು.ಉಪ ವಿಭಾಗಾಧಿಕಾರಿ ಎಂ. ಗಂಗಪ್ಪ ಮಾತನಾಡಿ,

"ಬೆಳಗಿನ ಜಾವ ನಡೆದ ಘಟನೆ ಕುರಿತು ಅಧಿಕಾರಿಗಳನ್ನು ತರಾ-ಟೆಗೆ ತೆಗೆದುಕೊಂಡಿದ್ದೇನೆ. ಜಿಲ್ಲಾಧಿಕಾರಿಗಳೂ ಸಹ ಘಟನೆಗೆ ಬೇಸರ ವ್ಯಕ್ತಪಡಿಸಿದ್ದಾರೆ. ಮಹನೀಯರ ಮೂರ್ತಿ ತೆರವುಗೊಳಿಸುವುದು ಸರಿಯಾದ ಕ್ರಮವಲ್ಲ. ಮೇಲಧಿಕಾರಿಗಳ ಗಮನಕ್ಕೆ ತರದೆ ಈ ರೀತಿ ಮಾಡಿರುವುದು ತಪ್ಪು. ಪುರಸಭೆ ಮುಖ್ಯಾಧಿಕಾರಿ ತಹಶೀಲ್ದಾರರಿಗೆ ಶೋಕಾಸ್ ನೋಟಿಸ್ ನೀಡಿ ಶಿಸ್ತುಕ್ರಮ ಕೈಗೊಳ್ಳುತ್ತೇವೆ. ನಾಳೆಯೇ ಮೂರ್ತಿ ಸ್ಥಾಪನೆಗೆ ಅರ್ಜಿ ಸಲ್ಲಿಸಿದರೆ ತಕ್ಷಣ ಠರಾವ ಪಾಸ್ ಮಾಡಿ ಪರವಾನಗಿ ನೀಡುತ್ತೇನೆ. ವೃತ್ತಕ್ಕೆ ಬೇಕಾದ ಎಲ್ಲಾ ಸೌಲಭ್ಯ ಒದಗಿಸಲು ಸಿದ್ಧರಿದ್ದು, ಚನ್ನಮ್ಮ ಜಯಂತಿಯಲ್ಲಿ ನಾನೂ ಭಾಗವಹಿಸುತ್ತೇನೆ ಇಲಾಖೆಯಿಂದ ಈ ಘಟನೆಗೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಹೋರಾಟಗಾರರ ಮನವಲಿಸಿದರು. ಡಿವೈಎಸ್ಪಿ ಪ್ರಭುಗೌಡ ಕಿರೇದಳ್ಳಿ ಮಾತನಾಡಿ , ಸಾರ್ವಜನಿಕ ಸ್ಥಳದಲ್ಲಿ ಮೂರ್ತಿ ಪ್ರತಿಷ್ಠಾಪನೆಗೆ ತನ್ನದೇ ಹಿನ್ನೆಲೆ ಇರುತ್ತದೆ. ರಾಷ್ಟ್ರಮಾತೆಯ ಮೂರ್ತಿ ತೆರವಿಗೆ ಮುಂದಾಗಿ ಸಾರ್ವಜನಿಕರ ಭಾವನೆಗಳಿಗೆ ಧಕ್ಕೆ ತಂದಿರುವುದು ಅಕ್ರಮ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ನಮ್ಮ ಇಲಾಖೆಯಿಂದ ಕ್ರಮ ಕೈಗೊಳ್ಳುತ್ತೇವೆ ಹಾಗೂ ಈ ಘಟನೆಗೆ ವಿಷಾದ ವ್ಯಕ್ತಪಡಿಸಿದರು. ಧರಣಿಯಲ್ಲಿ ಬಿ.ಎಂ. ಸಜ್ಜನರ, ಚಂಬಣ್ಣ ಚವಡಿ,ಅಂಬರೀಶ ಬಳಿಗಾರ, ಟಿ. ಎಸ್. ರಾಜೂರ,ಬಸವರಾಜ ಪುರ್ತಗೇರಿ, ಆರ್. ಕೆ.ಚವ್ಹಾಣ, ಲಿಂಗರಾಜ ಪಾಟೀಲ, ಮುತ್ತಣ್ಣ ಮ್ಯಾಗೇರಿ, ಉಮೇಶ ಮಲ್ಲಾಪುರ, ಉಮೇಶ ಪಾಟೀಲ, ಮುತ್ತು ಕಡಗಡ, ಸುಭಾಸ್ ಮಾಗೇರಿ, ಸಂತೋಷ ವಸ್ತ್ರದ, ಬಸವರಾಜ ಬಂಕದ, ಚಂದ್ರಶೇಖರ ಚಳಗೇರಿ, ದೇವಪ್ಪ ಮಡಿವಾಳರ, ವಿನಾಯಕ ಜರತಾರಿ , ಕರಣ ಬಂಡಿ, ಶಿವರಾಜ ಬಂಡಿ, ಬಸವರಾಜ ಕಡಬಲಕಟ್ಟಿ, ಸುರೇಶ ಜಾಲಿಹಾಳ, ಮಹಾಂತೇಶ ಮಳಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



## ಗವಾಯಿಗಳು ನಾಡಿಗೆ ಕಲಾವಿದರನ್ನು ನೀಡಿ ಅವರ ಬಾಳಿಗೆ ಬೆಳಕಾಗಿದ್ದಾರೆ: ಶಂಕರಾನಂದ ಮಹಾಸ್ವಾಮಿಗಳು

**ಸತ್ಯಮಿಥ್ಯ ಸುದ್ದಿಮೂಲ ಗದಗ :**
ಮಕ್ಕಳ ವ್ಯಕ್ತಿತ್ವ ನಿರ್ಮಾಣದಲ್ಲಿ ತಾಯಿ ಹಾಗೂ ಗುರುವಿನ ಪಾತ್ರ ಮಹತ್ತರವಾದದ್ದು ಗದಗ ಮುಕ್ಕಣ್ಣೇಶ್ವರ ಮಠದ ಶಂಕರಾ ನಂದ ಮಹಾಸ್ವಾಮಿಗಳು ಹೇಳಿದರು.

ಅವರು ಪಟ್ಟಣದ
ಗಾನ ಗಂಧರ್ವ ಕಲಾ ಟ್ರಸ್ಟ್ ನಾದಶ್ರೀ ಸಂಗೀತ ಪಾಠಶಾಲೆ ಆವರಣದಲ್ಲಿ ಆಚರಿಸಿದ ಪರಮ ಪೂಜ್ಯ ಲಿಂಗಕ್ಯೆ ಪಂಡಿತ್ ಪುಟ್ಟರಾಜ ಗವಾಯಿಗಳವರ 16ನೇ ಪುಣ್ಯ ಸ್ಮರಣೋತ್ಸವ ನಾದಶ್ರೀ ಸಂಗೀತ ಪಾಠಶಾಲೆ ಮೂರನೇ ವಾರ್ಷಿಕೋತ್ಸವ ಹಾಗೂ ಪುಟ್ಟರಾಜ ಪುರಸ್ಕಾರ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡುತ್ತಾ ಪೂಜ್ಯ ಪುಟ್ಟರಾಜ ಗವಾಯಿಗಳು ನಾಡಿಗೆ ಅನೇಕ ಕಲಾವಿದರನ್ನು ನೀಡಿ ಅವರ ಬಾಳಿಗೆ ಬೆಳಕಾಗಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ ಬಸವರಾಜ್ ಬಳ್ಳಾರಿ ಯವರು ಮಕ್ಕಳಲ್ಲಿ ಸದಾಭಿರುಚಿ ಬೆಳೆಯಲು ಕಾರಣವಾಗುವ ಸಂಗೀತ ಶಿಕ್ಷಣವನ್ನು ನೀಡುತ್ತಿರುವ ಗಾನಗಂಧರ್ವ ಕಲಾ ಟ್ರಸ್ಟ್ ಕಾರ್ಯ ಶ್ಲಾಘನಿಯ ಎಂದು ಹೇಳಿದರು.

ಶ್ರೀ ಗುರು ಪುಟ್ಟರಾಜ ಪುರಸ್ಕಾರ ಶಿಕ್ಷಣ ಗೌರವ ಪ್ರಶಸ್ತಿಗೆ ಭಾಜನರಾದ ಜಯದೇವಿ ಏಕವಲ್ಲೂರ್ ತಮ್ಮ ನುಡಿ ನಮನದಲ್ಲಿ ಮಕ್ಕಳ ಸಕಾರಾತ್ಮಕ ವ್ಯಕ್ತಿತ್ವಕ್ಕೆ ಪೋಷಕರ ನಡವಳಿಕೆ ಅತ್ಯಂತ ಪ್ರಭಾವಶಾಲಿಯಾಗಿದ್ದು ಪೋಷಕರು ಪ್ರತಿದಿನ ಕನಿಷ್ಠ ಅರ್ಧ ಗಂಟೆಯಾದರೂ ಮಕ್ಕಳ ಜೊತೆ ಬೆರೆಯಬೇಕು ಮಕ್ಕಳ ಎದುರಲ್ಲೇ ಜಗಳವಾಡಬಾರದು ಶಿಕ್ಷಕರ ಬಗ್ಗೆ ಕೀಳಾಗಿ ಮಾತನಾಡಬಾರದು ಎಂದು ಕಿವಿಮಾತು ಹೇಳಿದರು.

ಮುಖ್ಯ ಅತಿಥಿ ಮೂತ್ರರೋಗ ತಜ್ಞ ಡಾ ಪ್ರವೀಣ ಡಂಬಳ ರವರು ದೇಹ ದಾನಂ ಮಹತ್ವವನ್ನು ತಿಳಿಸಿದರು.

ಭಾರತೀಯ ಕೌಶಲ್ಯ ಕಲೆ ಮೆಚ್ಚಿ ಮಲೇಷಿಯಾದ ಉಗಾಂಡ ವಿಶ್ವವಿದ್ಯಾಲಯ ಡಾ"ಪದವಿ ಪೂರ್ವ ಪ್ರಸಾದ ಸೇವೆಯ ಸಿದ್ದರಾಮಯ್ಯ ಬಸವರಾಜ್ ಅಂಗಡಿ ಟ್ರಸ್ಟಿಗೆ ಹಾರ್ಮೋನಿಯಂ ಕಾಣಿ-ಕೆ ಗಂಗಣ್ಣ ಬಿ ಮಲ್ಲಾಡದವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು.

ಭಾಗ್ಯ ಶೇಖರಯ್ಯ ವಿಭೂತಿಯವರು ಮನಮೋಹಕ ಬಾನ್ಸೂರೀ
ವಾದನ, ಡಾ.ಹನುಮಂತ ಬಿ ಹೂಗಾರ್ ತಬಲಾ ಸಾತ್ ಹಾಗೂ ನಾದಶ್ರೀ ಸಂಗೀತ ಪಾಠಶಾಲೆಯ ಮಕ್ಕಳ ವಚನ ಗಾಯನವನ್ನು ಅಕ್ಷಯ್ ಹೂಗಾರ್ ತಬಲ ಸಾತ್ ಮತ್ತು ಭರತನಾಟ್ಯ ಮೆಚ್ಚುಗೆ ಪಡೆದವು.

ಸಿದ್ದಲಿಂಗಯ್ಯಶಾಸ್ತ್ರಿಗಡ್ಡದಮಠಸ್ವಾಗತಿಸಿದರು. ಶಿವಯೋಗಿ ಗಡ್ಡದಮಠ ನಿರೂಪಿಸಿದರರು. ಶಿವಬಸಯ್ಯ ಗಡ್ಡದಮಠ ವಂದಿಸಿದರು.




### ಶ್ರೀಲಂಕಾದಲ್ಲಿ ನಡೆಯುವ ಅಂತರರಾಷ್ಟ್ರೀಯ ಶಾಸ್ತ್ರೀಯ ನೃತ್ಯೋತ್ಸವ:

## ಭಾರತ ಪ್ರತಿನಿಧಿಸಲಿರುವ ಬೆಂಗಳೂರಿನ ಶ್ರೀ ಲಲಿತಾ ಕಲಾ ನಿಕೇತನ

**ಸತ್ಯಮಿಥ್ಯ ಸುದ್ದಿಮೂಲ ಬೆಂಗಳೂರು:**
ನೃತ್ಯ ಗುರು ವಿದುಷಿ ಶ್ರೀಮತಿ ರೇಖಾ ಜಗದೀಶ್ ಅವರ ತಾಂತ್ರಿಕ ಅಕಾಡೆಮಿಕ್ ಮಾರ್ಗದರ್ಶನ ಹಾಗೂ ಕಲಾತ್ಮಕ ನೃತ್ಯ ನಿರ್ದೇಶನದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಲಲಿತಾ ಕಲಾ ನಿಕೇತನ ಸಂಸ್ಥೆಯು ಶ್ರೀಲಂಕಾದಲ್ಲಿ ನಡೆಯುವ ಪ್ರತಿಷ್ಠಿತ ನೃತ್ಯೋತ್ಸವದಲ್ಲಿ ಭರತನಾಟ್ಯ ಪ್ರದರ್ಶನವನ್ನು ನೀಡಲು ಭಾರತದ ಪರವಾಗಿ ಬೆಂಗಳೂರಿನ ಈ ಸಂಸ್ಥೆ ಗೌರವಾನ್ವಿತ ಅವಕಾಶವನ್ನು ಪಡೆದಿದೆ.

ಈ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ, ಶ್ರೀ ಲಲಿತಾ ಕಲಾ ನಿಕೇತನದ ಕಲಾವಿದರು ಭಾರತದ ಶ್ರೀಮಂತ ಶಾಸ್ತ್ರೀಯ ನೃತ್ಯ ಪರಂಪರೆ, ಭರತನಾಟ್ಯದ ಸೌಂದರ್ಯ, ಶಾಸ್ತ್ರೀಯತೆಯ ಹಾಗೂ ಕಲಾತ್ಮಕ ವೈಭವವನ್ನು ಶ್ರೀಲಂಕಾದ ಅಂತರರಾಷ್ಟ್ರೀಯ ವೇದಿಕೆಯಲ್ಲಿ ಅನಾವರಣಗೊಳಿಸಿ ಭಾರತೀಯ ಸಂಸ್ಕೃತಿಕ ನೃತ್ಯ ಪರಂಪರೆಯನ್ನ ಅಂತರರಾಷ್ಟ್ರೀಯ ವೇದಿಕೆಯಲ್ಲಿ ಪ್ರದರ್ಶನ ಗೊಳಿಸಲಿದ್ದಾರೆ ಇದರ ಜೊತೆಗೆ,ಶ್ರೀಲಂಕಾದಲ್ಲಿರುವ ಭಾರತದ ರಾಯಭಾರಿ ಕಚೇರಿಯ ಸಮ್ಮುಖದಲ್ಲಿ ವಿಶೇಷ ಭರತನಾಟ್ಯ ಪ್ರದರ್ಶನವನ್ನು ನೀಡುವ ಸೌಭಾಗ್ಯವೂ ಶ್ರೀ ಲಲಿತಾ ಕಲಾ ನಿಕೇತನಕ್ಕೆ ದೊರೆತಿದೆ.



ಎಂಬುದು ಅಭಿನಂದನೆಯ ಈ ಅವಕಾಶವು ಬೆಂಗಳೂರಿನ ಶ್ರೀ ಲಲಿತಾ ಕಲಾ ನಿಕೇತನದ ಕಲಾಯಾತ್ರೆಯಲ್ಲಿ ಮಹತ್ವದ ಮೈಲಿಗಲ್ಲಾಗಿದ್ದು, ಭಾರತೀಯ ಶಾಸ್ತ್ರೀಯ ನೃತ್ಯವನ್ನು ಸಂರಕ್ಷಿಸುವ, ಉತ್ತೇಜಿಸುವ ಹಾಗೂ ಮುಂದಿನ ಪೀಳಿಗೆಗೆ ತಲುಪಿಸುವ ಸಂಸ್ಥೆಯ ನಿರಂತರ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

ಗುರು ವಿದುಷಿ ಶ್ರೀಮತಿ ರೇಖಾ ಜಗದೀಶ್ ಅವರು , ಭಾರತದ ರಾಯಭಾರಿ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಷ್ಟ್ರೀಯ ಮಕ್ಕಳ ಪ್ರತಿಭಾ ಕೇಂದ್ರ
ಕರ್ನಾಟಕದ ನೃತ್ಯ ಗುರುಗಳು ಪೂಜ್ಯ ಗುರುಗಳು, ಹಿರಿಯರು, ಹಿತೈಷಿಗಳು ಹಾಗೂ ನೃತ್ಯ ರಸಿಕರು ನೀಡುತ್ತಿರುವ ನಿರಂತರ ಪ್ರೋತ್ಸಾಹ ಮತ್ತು ಬೆಂಬಲಕ್ಕಾಗಿ ಹೃತ್ಪೂರ್ವಕ ವಂದನೆಗಳನ್ನ ವಿದುಷಿ ರೇಖಾ ಜಗದೀಶ್ ಕೃತಜ್ಞತಾಪೂರ್ವಕವಾಗಿ ಸಲ್ಲಿಸಿದ್ದಾರೆ. ಈ ಸಾಧನೆಗೆ ಪತ್ರಕರ್ತರ ವೇದಿಕೆ ಬೆಂಗಳೂರು ಮತ್ತು ರಾಷ್ಟ್ರೀಯ ಮಕ್ಕಳ ಪ್ರತಿಭಾ ಕೇಂದ್ರ ಬೆಂಗಳೂರು ವಿದುಷಿ ರೇಖಾ ಜಗದೀಶ್ ತಂಡವನ್ನು ಅಭಿನಂದನೆಸುತ್ತದೆ.

## ಶಾರದಾ ವಿದ್ಯಾ ಸಂಸ್ಥೆಯ ವಸತಿ ನಿಲಯದಲ್ಲಿ ಅದ್ದೂರಿ ಗಣೇಶ ವಿಸರ್ಜನೆ

**ಸತ್ಯಮಿಥ್ಯ ಸುದ್ದಿಮೂಲ ಗಂಗಾವತಿ**
ನಗರದ ವಿದ್ಯಾನಗರದಲ್ಲಿರುವ ಶ್ರೀ ಶಾರದಾ ವಿದ್ಯಾ ಸಂಸ್ಥೆಯ ವಸತಿ ನಿಲಯದಲ್ಲಿ ಏಳು ದಿನಗಳ ಕಾಲ ಭಕ್ತಿಭಾವದಿಂದ ಪೂಜಿಸಲ್ಪಟ್ಟ ಪರಿಸರ ಸ್ನೇಹಿ ಮಣ್ಣಿನ ಗಣೇಶ ಮೂರ್ತಿಯ ವಿಸರ್ಜನಾ ಕಾರ್ಯಕ್ರಮವು ಭಕ್ತಿ, ಸಂಭ್ರಮ ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಅದ್ದೂರಿಯಾಗಿ ನೆರವೇರಿತು.

ಗಣೇಶೋತ್ಸವದ ಅಂಗವಾಗಿ ವಸತಿ ನಿಲಯದಲ್ಲಿ ಮಣ್ಣಿನಿಂದ ತಯಾರಿಸಿದ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಏಳು ದಿನಗಳ ಕಾಲ ವಿಶೇಷ ಪೂಜೆ, ಪುನಸ್ಕಾರ ಹಾಗೂ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಲಾಯಿತು. ಪ್ರತಿದಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಗಣೇಶನಿಗೆ ಭಕ್ತಿಯಿಂದ ಪ್ರಾರ್ಥನೆ ಸಲ್ಲಿಸಿದರು. ವಿಸರ್ಜನಾ ದಿನದಂದು ವಿದ್ಯಾರ್ಥಿಗಳು ವಿವಿಧ ದೇವರುಗಳ ವೇಷಭೂಷಣಗಳನ್ನು ಧರಿಸಿ ಗಮನಸೆಳೆದರು. ಶಿವಪಾರ್ವತಿ ಗಣೇಶ, ನಾರದಮುನಿ, ಹಾಗೂ ಆಂಜನೇಯ ವೇಷದಲ್ಲಿ ವಿದ್ಯಾರ್ಥಿಗಳು ಕಂಗೊಳಿಸಿದ್ದು, ಭಾರತೀಯ ಸಂಸ್ಕೃತಿ ಹಾಗೂ ಪೌರಾಣಿಕ ಪರಂಪರೆಯನ್ನು ಪ್ರತಿಬಿಂಬಿಸುವಂತಿತ್ತು. ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ, ನೃತ್ಯ ಹಾಗೂ ಮನರಂಜನಾ ಕಾರ್ಯಕ್ರಮಗಳು ಜರುಗಿದವು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಸಂಕ್ರಾಂತಿ ಪ್ರಸಾದ್, "ಏಳು ದಿನಗಳ ಕಾಲ ಗಣೇಶನಿಗೆ ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಲಾಗಿದೆ. ವಿಸರ್ಜನಾ ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಪೌರಾಣಿಕ ವೇಷಭೂಷಣಗಳೊಂದಿಗೆ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಇಂತಹ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳು ನಮ್ಮ ಭಾರತೀಯ ಸಂಸ್ಕೃತಿ, ಪರಂಪರೆ, ಧಾರ್ಮಿಕ ಆಚರಣೆಗಳು ಹಾಗೂ ಪೌರಾಣಿಕ ಕಥನಗಳ ಬಗ್ಗೆ ಅರಿವು ಬೆಳೆಸಿಕೊಳ್ಳಬೇಕು. ಶಿಕ್ಷಣದ ಜೊತೆಗೆ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಜವಾಬ್ದಾರಿ ಕೂಡ ನಮ್ಮ ಮೇಲಿದೆ. ಪರಿಸರದ ಸಂರಕ್ಷಣೆಯ ದೃಷ್ಟಿಯಿಂದ ಮಣ್ಣಿನ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿರುವುದು ಸಂತಸದ ವಿಷಯವಾಗಿದೆ," ಎಂದು ಹೇಳಿದರು.



ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿಕ ಮೌಲ್ಯಗಳು, ಶಿಸ್ತು, ಸಹಕಾರ ಮನೋಭಾವ ಹಾಗೂ ನಮ್ಮ ಪರಂಪರೆಯ ಬಗ್ಗೆ ಗೌರವ ಬೆಳೆಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ಅವರು ತಿಳಿಸಿದರು. ಗಣೇಶೋತ್ಸವವು ಕೇವಲ ಧಾರ್ಮಿಕ ಆಚರಣೆಗೆ ಸೀಮಿತವಾಗದೆ, ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ಹಾಗೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಪರಿಚಯಕ್ಕೆ ವೇದಿಕೆಯಾಗಬೇಕು ಎಂಬ ಸಂದೇಶವನ್ನು ಕಾರ್ಯಕ್ರಮದಲ್ಲಿ ನೀಡಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಗೌರವಾಧ್ಯಕ್ಷರು ಸತ್ಯನಾರಾಯಣ, ಸದಸ್ಯರು ಸುಬ್ಬರಾವ್, ವಸತಿ ನಿಲಯದ ಆಡಳಿತಾಧಿಕಾರಿಗಳಾದ ವೀಣಾ, ರಾಮು, ಹುಸೇನ್, ದರ್ಶನ್, ಚಾನ್ ಭಾಷಾ, ಮಂಜುಳಾ, ಜಗದೀಶ್ವರಿ, ಶ್ರೀವಾಣಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಜಕ್ಕಲಿ ಅನ್ನದಾನೇಶ್ವರ ಶ್ರೀಮಠದಲ್ಲಿ ಸೆ.23ರಿಂದ ಪುರಾಣ ಪ್ರವಚನ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ಸಮೀಪದ ಜಕ್ಕಲಿ ಗ್ರಾಮದ ಶ್ರೀ ಗುರು ಅನ್ನದಾನೇಶ್ವರ ಜಾತ್ರಾ ಮಹೋತ್ಸವದಅಂಗವಾಗಿಸೆ.23ರಿಂದಅ.20ರವರೆಗೆಪ್ರತಿದಿನ ಸಂಜೆ 7.30ರಿಂದ ರಾತ್ರಿ 9ರವರೆಗೆ ಶ್ರೀಮಠದ ಆವರಣದಲ್ಲಿ ಮಹಾದಾಸೋಹಿ ಕಲಬುರ್ಗಿ ಶ್ರೀ ಶರಣಬಸವೇಶ್ವರ ಪುರಾಣ ಪ್ರವಚನ ನಡೆಯಲಿದೆ.

ಹಾಲಕೆರೆಯ ಅನ್ನದಾನೇಶ್ವರ ಸಂಸ್ಥಾನ ಮಠದ ಜಗದ್ಗುರು ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳ ಅಪ್ಪಣೆಯ ಮೇರೆಗೆ ಕಾರ್ಯಕ್ರಮ ಆಯೋಜಿಸಲಾಗಿದೆ. ದ್ಯಾಂಪೂರದ ಕಲ್ಲಿನಾಥ ಕವಿ ವಿರಚಿತ ಶರಣಬಸವೇಶ್ವರ ಪುರಾಣವನ್ನು ಬೇವೂರಿನ ಪ್ರವಚನ ಪ್ರವೀಣ ವೇ.ಮೂ. ಪಂಡಿತ ಎಂ.ಜಿ. ಗುರುಸಿದ್ದೇಶ್ವರ ಶಾಸ್ತ್ರಿಗಳು ಪ್ರವಚನದ ಮೂಲಕ ಭಕ್ತರಿಗೆ ತಿಳಿಸಿಕೊಡಲಿದ್ದಾರೆ. ಆಕಾಶವಾಣಿ ಕಲಾವಿದ ಸುರೇಶ ಬೆನಕಟ್ಟಿ ತಬಲಾ ವಾದನದ ಮೂಲಕ ಸಹಕರಿಸಲಿದ್ದಾರೆ.

ಪುರಾಣ ಪ್ರವಚನದ ಮೂಲಕ ಶರಣರ ಜೀವನ, ಶಿವಭಕ್ತಿ, ದಾಸೋಹ ಹಾಗೂ ಧಾರ್ಮಿಕ ಮೌಲ್ಯಗಳ ಸಂದೇಶವನ್ನು ಭಕ್ತರಿಗೆತಲುಪಿಸುವಉದ್ದೇಶಹೊಂದಲಾಗಿದೆ.ಜಕ್ಕಲಿಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಪ್ರತಿದಿನ ನಡೆಯುವ ಪುರಾಣ ಪ್ರವಚನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಜಾತ್ರಾ ಸಮಿತಿ ಹಾಗೂ ಸಕಲ ಸದ್ಭಕ್ತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

## ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಬ್ಯಾಗ ವಿತರಣೆ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ :**
ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಬ್ಯಾಗ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟನೆ ಮಾಡಿ ಮಕ್ಕಳಿಗೆ ಬ್ಯಾಗು ವಿತರಿಸಿ ಮಾತಾನಾಡಿದ, ಮಿಥುನ್ ಜಿ ಪಾಟೀಲ್. ಸರ್ಕಾರಿ ಶಾಲಾ –ಕಾಲೇಜುಗಳಲ್ಲಿ ಹಳ್ಳಿಗಾಡಿನ ಬಡ ಮಕ್ಕಳು ಓದುತ್ತಿದ್ದು, ಅವರಿಗೆ ಬೇಕಾದ ಸಕಲ ಸೌಕರ್ಯಗಳನ್ನು ಒದಗಿಸುವಲ್ಲಿ ಶಾಸಕರಾದ ಜಿ ಎಸ್ ಪಾಟೀಲ್ ಅವರು ಅವಿರತ ಪ್ರಯತ್ನಿಸುತ್ತಿದ್ದಾರೆ. ಮಕ್ಕಳ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸಿದರು.

ಪ್ರಾಸ್ತವಿಕ ನುಡಿಗೈದ ಬಸವರಾಜ ಶೀಲವಂತರ ಅವರು ಶಿಕ್ಷಣದ ಆದ್ಯತೆ ಇಂದಿನ ಅಗತ್ಯ ತುರ್ತು. ಉತ್ತಮ ನಾಗರಿಕರ ನಿರ್ಮಾಣ ಶಿಕ್ಷಣದಿಂದ ಸಾಧ್ಯ ಎಂದರು.

ಪ್ರಾಚಾರ್ಯರಾದ ರಮೇಶ್ ಮಾರಾಠಿ ಮಾತನಾಡಿ, ಸರ್ಕಾರಿ ಕಾಲೇಜುಗಳ ಅಭಿವೃದ್ಧಿಗಾಗಿ ಈ ರೀತಿ ಸಕಾರಾತ್ಮಕವಾಗಿ ಸ್ಪಂದಿಸುತ್ತಿರುವುದು ತಮಗೆ ಖುಷಿ ತಂದಿದೆ ಎಂದರು.

ವೇದಿಕೆಯಲ್ಲಿ ಶ್ರೀ ಶಿವರಾಜ ಘೋರ್ಪಡೆ, ರಾಜು ಸಾಂಗ್ಲಿಕರ,ಶ್ರೀಧರ ಬಿದರಳ್ಳಿ,ಹಸನಸಾಬ ತಟಗಾರ, ಎ ಡಿ ಕೋಲಕಾರ, ಶಿವಕುಮಾರ್ ರಾಠೋಡ, ಶ್ರೀಧರ ಗಂಜಿಗೌಡ್ರ ಉಪನ್ಯಾಸಕರಾದ ವೆಂಕಟೇಶ ಕುಕಬಾಯಿ, ವೀರಯ್ಯ, ಶಿಲ್ಪಾ, ಸುನೀತಾ ಎಸ್, ಸಿದ್ದಪ್ಪ,ಉಸ್ಮಾನಗಣಿ ಹಿರೇಹಾಳ, ವಿನೋದಕುಮಾರ, ಶಾಲಿನಿ, ನೇತ್ರಾವತಿ, ಪೂಜಾ, ಸಂಗಮೇಶ ಹುನಗುಂದ, ಶರಣಪ್ಪ, ಆಸೀಫ್ ಮೊಮೀನ್, ಮುಂತಾದ ಉಪನ್ಯಾಸ ಸಿಬ್ಬಂದಿ ಉಪಸ್ಥಿತರಿದ್ದರು.



## ಪಡಿತರ ಪಡೆಯಲು ಬಿಸಿಲು, ಮಳೆಯಲ್ಲೂ ಪರದಾಟ: ಗ್ರಾಮಸ್ಥರ ಆಕ್ರೋಶ

**ಸತ್ಯಮಿಥ್ಯ ಸುದ್ದಿಮೂಲ ಡೋಣಿ:**
ಪಡಿತರ ಪಡೆಯಲು ಬರುವ ವೃದ್ಧರು, ಮಹಿಳೆಯರು ಸೇರಿದಂತೆ ಫಲಾನುಭವಿಗಳು ತೀವ್ರ ಬಿಸಿಲು ಹಾಗೂ ಮಳೆಯ ನಡುವೆಯೂ ಗಂಟೆಗಟ್ಟಲೆ ಹೊರಗಡೆ ನಿಂತು ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಡೋಣಿ ಗ್ರಾಮದ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಡೋಣಿ ಗ್ರಾಮದ ನ್ಯಾಯಬೆಲೆ ಅಂಗಡಿ ಸಂಖ್ಯೆ 13ರಲ್ಲಿ ಪಡಿತರ ವಿತರಣೆ ನಡೆಯುತ್ತಿದ್ದು, ಫಲಾನುಭವಿಗಳಿಗೆ ಸೂಕ್ತ ನೆರಳು ಹಾಗೂ ಮಳೆಯಿಂದ ರಕ್ಷಣೆ ಪಡೆಯಲು ಅಗತ್ಯ ವ್ಯವಸ್ಥೆ ಕಲ್ಪಿಸಿಲ್ಲ. ಅಂಗಡಿ ಸಿಬ್ಬಂದಿ ನೆರಳಿನಲ್ಲಿ ಕುಳಿತು ಪಡಿತರ ವಿತರಿಸುತ್ತಿದ್ದರೆ, ಪಡಿತರ ಪಡೆಯಲು ಬಂದಿರುವ ವೃದ್ಧರು, ಮಹಿಳೆಯರು ಹಾಗೂ ಇತರ ಫಲಾನುಭವಿಗಳು ಬಿಸಿಲು ಅಥವಾ ಮಳೆಯಲ್ಲಿಯೇ ತಮ್ಮ ಸರದಿಗಾಗಿ ಕಾಯಬೇಕಾಗಿದೆ ಎಂದು ಗ್ರಾಮಸ್ಥರು ದೂರಿದ್ದಾರೆ.

ತೀವ್ರ ಬಿಸಿಲಿನ ಸಂದರ್ಭದಲ್ಲಿ ವೃದ್ಧರು ಹಾಗೂ ಮಹಿಳೆಯರು ನೆರಳಿಲ್ಲದೆ ನಿಲ್ಲಬೇಕಾಗಿದ್ದು, ಮಳೆಗಾಲದಲ್ಲಿಯೂ ಇದೇ ರೀತಿಯ ಸಮಸ್ಯೆ ಮುಂದುವರಿದಿದೆ. ಮಳೆ ಬಂದ ಸಂದರ್ಭದಲ್ಲಿ ಫಲಾನುಭವಿಗಳು ನೆನೆಯುತ್ತಲೇ ಪಡಿತರ ಪಡೆಯಲು ಕಾಯಬೇಕಾದ ಪರಿಸ್ಥಿತಿ ಎದುರಾಗುತ್ತಿದೆ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಫಲಾನುಭವಿಗಳಿಗೆ ಕನಿಷ್ಠ ನೆರಳಿನ ವ್ಯವಸ್ಥೆ, ಕುಡಿಯುವ ನೀರು ಹಾಗೂ ಮಳೆಗಾಲದಲ್ಲಿ ರಕ್ಷಣೆ ಪಡೆಯಲು ಸೂಕ್ತ ವ್ಯವಸ್ಥೆ ಕಲ್ಪಿಸುವ ಮೂಲಕ ಪಡಿತರ ವಿತರಣೆಯನ್ನು ಸುಗಮಗೊಳಿಸಬೇಕು. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಪರಿಶೀಲಿಸಿ, ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.



## ರೋಣ ಸಂಪರ್ಕ ಶಾಖೆಯಲ್ಲಿ ಎಲ್‌ಐಸಿ ಪ್ರತಿನಿಧಿಗಳ ತರಬೇತಿ

**ಸತ್ಯಮಿಥ್ಯ ಸುದ್ದಿಮೂಲ ರೋಣ:**
ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಗದಗ–2 ಶಾಖೆ ಹಾಗೂ ರೋಣ ಸಂಪರ್ಕ ಶಾಖೆಯ ಸಹಯೋಗದಲ್ಲಿ ರೋಣ ಶಾಖೆಯ ಪ್ರತಿನಿಧಿಗಳ ತರಬೇತಿ ಕಾರ್ಯಕ್ರಮವು ರೋಣ ಸಂಪರ್ಕ ಶಾಖೆಯಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಗದಗ ಜೀವ ವಿಮಾ ನಿಗಮದ ಶಾಖಾಧಿಕಾರಿ ಚಿನ್ಮಯ ಹೆಗಡೆ, ವ್ಯವಸ್ಥಾಪಕ ಶಾಖಾಧಿಕಾರಿ ಶ್ರೀ ಸಲೀಮ್ ಖಾವಸ್ ಹಾಗೂ ರೋಣ ಸಂಪರ್ಕ ಶಾಖಾಧಿಕಾರಿ ಶ್ರೀಮತಿ ಜಾಸ್ಮಿನ್ ಶೇಖ್ ಅವರು ವಿಶೇಷ ಅತಿಥಿಗಳಾಗಿ ಭಾಗವಹಿಸಿದ್ದರು.

ಇದೇಸಂದರ್ಭದಲ್ಲಿವಿಶೇಷಅತಿಥಿಗಳಾಗಿರಾಜಣ್ಣಮೈಸೂರುಅವರು ಉಪಸ್ಥಿತರಿದ್ದರು. ಅಭಿವೃದ್ಧಿ ಅಧಿಕಾರಿಗಳಾದ ಶರಣಪ್ಪ ಕಂಬಳ್ಳಿ, ವಿನಾಯಕ ಕೋರ್ಪಡೆ ಹಾಗೂ ಸುನೀಲ್ ಹಳ್ಳೂರು ಸೇರಿದಂತೆ ಶಾಖೆಯ ನೂರಾರು ಪ್ರತಿನಿಧಿಗಳು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



## ಗದಗದಲ್ಲಿ ಪಂ. ಪುಟ್ಟರಾಜ ಗವಾಯಿಗಳ ಪುಣ್ಯಾರಾಧನೆ

**ಸತ್ಯಮಿಥ್ಯ ಸುದ್ದಿಮೂಲ ಗದಗ:**
ಗಾನಯೋಗಿ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳ 16ನೇ ಪುಣ್ಯಾರಾಧನೆ ಅಂಗವಾಗಿ ಗಾನಯೋಗಿ ಡಾ. ಪಂ. ಪುಟ್ಟರಾಜ ಸೇವಾ ಸಮಿತಿ ವತಿಯಿಂದ ಸೋಮವಾರ ಗದಗ–ಬೆಟಗೇರಿ ಅವಳಿ ನಗರದಲ್ಲಿ ವಿವಿಧೆಡೆ ಪುಟ್ಟರಾಜ ಗವಾಯಿಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಭಕ್ತರು ಸಂಗೀತದ ಮೂಲಕ ಸ್ವರ ನಮನ ಸಲ್ಲಿಸಿದರು.

ನಗರದವೀರೇಶ್ವರಪುಣ್ಯಾಶ್ರಮದಲ್ಲಿಪುಟ್ಟರಾಜಗವಾಯಿಗಳ ಕರ್ತೃ ಗದ್ದುಗೆಯನ್ನು ಹೂವುಗಳಿಂದ ಅಲಂಕರಿಸಿ, ವಿಶೇಷ ಪೂಜೆ ನೆರವೇರಿಸಲಾಯಿತು. ಬೆಳಗ್ಗೆಯಿಂದಲೇ ಜಿಲ್ಲೆಯ ವಿವಿಧ ಭಾಗಗಳಿಂದ ಭಕ್ತರು ಪುಣ್ಯಾಶ್ರಮಕ್ಕೆ ಆಗಮಿಸಿ ಗದ್ದುಗೆಯ ದರ್ಶನ ಪಡೆದು ಪುನೀತರಾದರು.

ಪುಣ್ಯಾರಾಧನೆ ಹಿನ್ನೆಲೆಯಲ್ಲಿ ಆಶ್ರಮದಲ್ಲಿ ವಿವಿಧ ಧಾರ್ಮಿಕ ಹಾಗೂ ಸಂಗೀತ ಕಾರ್ಯಕ್ರಮಗಳು ಜರುಗಿದವು. ಸಂಗೀತ ಪರಿಕರಗಳೊಂದಿಗೆ ಗಾನಯೋಗಿ ಪಂ. ಪುಟ್ಟರಾಜ ಗವಾಯಿಗಳು ರಚಿಸಿದ ಭಕ್ತಿ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುವ ಮೂಲಕ ಸ್ವರ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮಹಿಳೆಯರು, ಮಕ್ಕಳು ಹಾಗೂ ಯುವಕರು ಸೇರಿದಂತೆ ನೂರಾರು ಭಕ್ತರು ಸಂಗೀತ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭಕ್ತಿರಸದಲ್ಲಿ ಮಿಂದೆದ್ದರು.

ಅಂಧರ ಸಂಗೀತ ಶಾಲೆಯ ವಿದ್ಯಾರ್ಥಿಗಳು ಸಂಗೀತ ಸೇವೆಯ ಮೂಲಕ ಪುಟ್ಟರಾಜ ಗವಾಯಿಗಳನ್ನು ಸ್ಮರಿಸಿದರು. ದಿನವಿಡೀ ನಡೆದ ಧಾರ್ಮಿಕ ಹಾಗೂ ಸಂಗೀತ ಕಾರ್ಯಕ್ರಮಗಳಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.



ಪುಣ್ಯಾರಾಧನೆ ಅಂಗವಾಗಿ ವಿವಿಧ ಸಂಘ–ಸಂಸ್ಥೆಗಳು, ಆಟೋ ಚಾಲಕರು ಮತ್ತು ಮಾಲೀಕರ ಸಂಘ, ವ್ಯಾಪಾರಸ್ಥರು ಹಾಗೂ ವಿವಿಧ ಬಡಾವಣೆ ಮತ್ತು ಗ್ರಾಮಗಳ ಭಕ್ತರು ನಗರದ ಪ್ರಮುಖ ಸ್ಥಳಗಳಲ್ಲಿ ವೇದಿಕೆಗಳನ್ನು ನಿರ್ಮಿಸಿದ್ದರು. ಹೂವು, ಹಣ್ಣುಗಳಿಂದ ಅಲಂಕರಿಸಿದ ವೇದಿಕೆಗಳಲ್ಲಿ ಪುಟ್ಟರಾಜ ಗವಾಯಿಗಳ ಭಾವಚಿತ್ರವನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು.

ಪುಣ್ಯಾರಾಧನೆ ಕಾರ್ಯಕ್ರಮಕ್ಕಾಗಿ ಭಕ್ತರು ಮುಂಚಿತವಾಗಿಯೇ ಸಿದ್ಧತೆ ಮಾಡಿಕೊಂಡಿದ್ದರು. ಬೆಳಗ್ಗೆಯಿಂದಲೇ ವಿವಿಧೆಡೆ ಭಕ್ತರು ಪುಟ್ಟರಾಜ ಗವಾಯಿಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಭಕ್ತಿಭಾವದಿಂದ ಗೌರವ ನಮನ ಸಲ್ಲಿಸಿದರು. ಪುಟ್ಟರಾಜ ಗವಾಯಿಗಳ ಪುಣ್ಯಾರಾಧನೆ ಅಂಗವಾಗಿ ವಿವಿಧ ಸಂಘ–ಸಂಸ್ಥೆಗಳ ವತಿಯಿಂದ ಮಹಾ ಅನ್ನಸಂತರ್ಪಣೆ ಕಾರ್ಯಕ್ರಮವೂ ನಡೆಯಿತು. ನಗರದ ರೈಲ್ವೆನಿಲ್ದಾಣ,ಹಳೆಯಬಸ್‌ನಿಲ್ದಾಣ,ಸ್ಟೇಷನ್‌ರಸ್ತೆ,ಕಾಟನ್ ಮಾರುಕಟ್ಟೆರಸ್ತೆ, ಮುಳಗುಂದ ನಾಕಾ, ಹಾತಲಗೇರಿ ನಾಕಾ, ಶಹಾಪುರ ಪೇಟೆ, ವೆಂಕಟೇಶ ಚಿತ್ರಮಂದಿರ ರಸ್ತೆ ಸೇರಿದಂತೆ ವಿವಿಧೆಡೆ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು. ಬೆಟಗೇರಿಯ ತೆಂಗಿನಕಾಯಿ ಬಜಾರ್, ಹೆಲ್ಲಾಂಪ್, ಎಸ್.ಎಂ. ಕೃಷ್ಣ ನಗರ, ಎಪಿಎಂಸಿ ಆವರಣ ಹಾಗೂ ಹೊಸ ಬಸ್ ನಿಲ್ದಾಣದ ಆಟೋ ನಿಲ್ದಾಣ ಸೇರಿದಂತೆ ಅವಳಿ ನಗರದ ಹಲವು ಪ್ರದೇಶಗಳಲ್ಲಿ ಭಕ್ತರಿಗೆ ಮಹಾ ಅನ್ನಸಂತರ್ಪಣೆ ನಡೆಯಿತು. ಅನ್ನಸಂತರ್ಪಣೆಯಲ್ಲಿ ನೂರಾರು ಭಕ್ತರು ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು. ಪುಟ್ಟರಾಜ ಗವಾಯಿಗಳ ಸಂಗೀತ, ಶಿಕ್ಷಣ ಹಾಗೂ ಸಮಾಜ ಸೇವೆಯನ್ನು ಸ್ಮರಿಸುತ್ತಾ ಭಕ್ತರು ಅವರ ಆದರ್ಶಗಳನ್ನು ಗೌರವಿಸಿದರು.

## ಹಾಬಲಕಟ್ಟಿ ಗ್ರಾಮದಲ್ಲಿ ಭಕ್ತಿಭಾವದಿಂದ ನಡೆದ ಶ್ರೀ ಪುಟ್ಟರಾಜ ಗವಾಯಿಗಳ ಪುಣ್ಯಸ್ಮರಣೆ

**ಸತ್ಯಮಿಥ್ಯ ಸುದ್ದಿಮೂಲ ಹಾಬಲಕಟ್ಟಿ:**
ಸಮೀಪದ ಹಾಬಲಕಟ್ಟಿ ಗ್ರಾಮದಲ್ಲಿ ಶ್ರೀ ಪುಟ್ಟರಾಜ ಗವಾಯಿಗಳವರ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಅತ್ಯಂತ ಭಕ್ತಿಭಾವ ಹಾಗೂ ಶ್ರದ್ಧೆಯಿಂದ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದ ಗ್ರಾಮದ ಶ್ರೀ ಕುಮಾರಸ್ವಾಮಿ ಹಿರೇಮಠ ಅವರು ಮಾತನಾಡಿ, ಶ್ರೀ ಪುಟ್ಟರಾಜ ಗವಾಯಿಗಳು ಸಾಮಾಜಿಕ, ಧಾರ್ಮಿಕ ಹಾಗೂ ಸಂಗೀತ ಕ್ಷೇತ್ರದಲ್ಲಿ ಸಲ್ಲಿಸಿದ ಅಪಾರ ಸೇವೆಯನ್ನು ಸ್ಮರಿಸಿದರು. ಗವಾಯಿಗಳ ದಿವ್ಯ ಆದರ್ಶಗಳು ಮತ್ತು ತತ್ವಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಅಗತ್ಯವಿದೆ ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ಹಾಗೂ ಅಪಾರ ಸಂಖ್ಯೆಯ ಭಕ್ತಾದಿಗಳು ಪಾಲ್ಗೊಂಡು ಶ್ರೀ ಪುಟ್ಟರಾಜ ಗವಾಯಿಗಳ ಪುಣ್ಯಸ್ಮರಣೆಗೆ ತಮ್ಮ ಗೌರವ ನಮನಗಳನ್ನು ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಪ್ರಮುಖರಾದ ಮೌನೇಶ ಬಡಿಗೇರ, ರಮೇಶ ಗಡಾದ, ಮಂಜುನಾಥ ಬಡಿಗೇರ, ನಾಗಲಿಂಗ ಬಡಿಗೇರ, ಮುತ್ತಣ್ಣ ಹವಲ್ದಾರ, ಕುಮಾರ ಹಿರೇಮಠ ಹಾಗೂ ಭೋವಿ ಮತ್ತು ಗಡಾದ ಕುಟುಂಬದವರು ಸೇರಿದಂತೆ ಗಣ್ಯರು ಇದ್ದರು.

## ಉಚಿತ ಆಯುಷ್ ಆರೋಗ್ಯ ತಪಾಸಣಾ ಶಿಬಿರ 500ಕ್ಕೂ ಹೆಚ್ಚು ಮಂದಿ ಆರೋಗ್ಯ ತಪಾಸಣೆ

**ಸತ್ಯಮಿಥ್ಯ ಸುದ್ದಿಮೂಲ ಬೆಟಗೇರಿ:**
ಸಾರ್ವಜನಿಕ ಶ್ರೀ ಗಜಾನನ ಉತ್ಸವ ಮಂಡಳಿ, ಬೆಟಗೇರಿ ಹಾಗೂ ಜಿಲ್ಲಾ ಆಸ್ಪತ್ರೆ ಆವರಣದಲ್ಲಿರುವ 50 ಹಾಸಿಗೆಗಳ ಸಂಯುಕ್ತ ಆಯುಷ್ ಆಸ್ಪತ್ರೆ, ಮಲ್ಲಸಮುದ್ರ, ಗದಗ ಇವರ ಸಂಯುಕ್ತ ಆಶ್ರಯದಲ್ಲಿ ಸೆ.20ರಂದು ಉಚಿತ ಆಯುಷ್ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು.

ಬೆಟಗೇರಿಯಮಲ್ಲಿಕಾರ್ಜುನರಸ್ತೆಯಲ್ಲಿರುವಸಾರ್ವಜನಿಕ ಶ್ರೀ ಗಜಾನನ ಉತ್ಸವ ಮಂಡಳಿಯ ಆವರಣದಲ್ಲಿ ಬೆಳಿಗ್ಗೆ 10ರಿಂದ ಸಂಜೆ 4.30ರವರೆಗೆ ನಡೆದ ಶಿಬಿರದಲ್ಲಿ ಅಧಿಕ ರಕ್ತದೊತ್ತಡ, ತಲೆಭಾರ, ಶಿಯಾಟಿಕಾ, ಬೆನ್ನುನೋವು, ಮೈಗ್ರೇನ್, ಮೊಣಕಾಲು ನೋವು, ಅಸ್ತಮಾ, ತಲೆನೋವು, ಮೂಲವ್ಯಾಧಿ ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳಿಗೆ ತಪಾಸಣೆ ನಡೆಸಿ, ವೈದ್ಯಕೀಯ ಸಲಹೆ ನೀಡಲಾಯಿತು.

ಶಿಬಿರದಲ್ಲಿ 500ಕ್ಕೂ ಹೆಚ್ಚು ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಉಚಿತ ಔಷಧಗಳನ್ನು ವಿತರಿಸಲಾಯಿತು. ಸಾರ್ವಜನಿಕರು ಶಿಬಿರದ ಸದುಪಯೋಗ ಪಡೆದುಕೊಂಡು, ಸಾರ್ವಜನಿಕ ಶ್ರೀ ಗಜಾನನ ಉತ್ಸವ ಮಂಡಳಿಯ ಸಾಮಾಜಿಕ ಸೇವಾ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಾರ್ವಜನಿಕ ಶ್ರೀ ಗಜಾನನ ಉತ್ಸವ ಮಂಡಳಿಯ ವತಿಯಿಂದ ಸಂಯುಕ್ತ ಆಯುಷ್ ಆಸ್ಪತ್ರೆಯ ವೈದ್ಯಾಧಿಕಾರಿಗಳು, ಆರೋಗ್ಯ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು.

ಶಿಬಿರದಲ್ಲಿ ಯುನಾನಿ ತಜ್ಞ ವೈದ್ಯರಾದ ಡಾ. ಸುಧಾಕರ, ವೈದ್ಯಾಧಿಕಾರಿ ಡಾ. ರಮೇಶ ದಿವಿಗಿಹಳ್ಳಿ ಹಾಗೂ 50 ಹಾಸಿಗೆಗಳ ಸಂಯುಕ್ತ ಆಯುಷ್ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಪಾಲ್ಗೊಂಡು ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸಾ ಸಲಹೆ ನೀಡಿದರು.

ಶಿಬಿರದ ಯಶಸ್ವಿಗೆ ಸಾರ್ವಜನಿಕ ಶ್ರೀ ಗಜಾನನ ಉತ್ಸವ ಮಂಡಳಿಯ ಅಧ್ಯಕ್ಷರು, ಕಾರ್ಯಕಾರಿ ಮಂಡಳಿ ಸದಸ್ಯರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಸಹಕರಿಸಿದರು.



## ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

**ಗದಗ :** 2026–27 ನೇ ಸಾಲಿಗೆ ಉಲ್ಲೇಖಿತ ಪತ್ರದ ಸೂಚನೆಯಂತೆ ಸಮಾಜ ಕಲ್ಯಾಣ ಇಲಾಖೆಯಿಂದ ಜಿಲ್ಲೆಯ ಪರಿಶಿಷ್ಟ ಜಾತಿಯ ಹಾಗೂ ಪರಿಶಿಷ್ಟ ಪಂಗಡಗಳ ಕಾನೂನು ಪದವೀಧರರಿಗೆ ವೃತ್ತಿ ತರಬೇತಿ ಅವಧಿಯಲ್ಲಿ ಶಿಷ್ಯವೇತನ ಪಾವತಿಸುವ ಕಾರ್ಯಕ್ರಮದಡಿ ಅರ್ಹ ಕಾನೂನು ಪದವೀಧರರನ್ನು ಆಯ್ಕೆ ಮಾಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಯು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಾಗಿರಬೇಕು. ಅರ್ಜಿ ಸಲ್ಲಿಸಲು ನಿಗದಿಪಡಿಸಿದ ದಿನಾಂಕಕ್ಕೆ 2 ವರ್ಷದ ಒಳಗೆ ಕಾನೂನು ಪದವಿ ಹೊಂದಿರಬೇಕು.ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು 40 ವರ್ಷಮೀರಿರಬಾರದು ಅಭ್ಯರ್ಥಿಯ ವಾರ್ಷಿಕ ಆದಾಯಮಿತಿ ರೂ. 2.00 ಲಕ್ಷಕ್ಕೆ ಮೀರಿರಬಾರದು. ಅಭ್ಯರ್ಥಿಯು ಬಾರ್ ಕೌನ್ಸಿಲ್‌ದಲ್ಲಿ ಹೆಸರನ್ನು ನೊಂದಾಯಿಸಿರಬೇಕು. ತರಬೇತಿಯ ಅವಧಿಯು 2 ವರ್ಷಗಳಾಗಿದ್ದು, ಆಯ್ಕೆಯಾದ ಅಭ್ಯರ್ಥಿಗಳು ತರಬೇತಿಯನ್ನು ಮಧ್ಯದಲ್ಲಿ ಬಿಡುವುದಿಲ್ಲವೆಂದು ಹಾಗೂ ಒಂದು ವೇಳೆ ಮಧ್ಯದಲ್ಲಿ ಬಿಟ್ಟರೆ ತರಬೇತಿಯ ಅವಧಿಯಲ್ಲಿ ಪಡೆದ ಶಿಷ್ಯವೇತನವನ್ನು ಶೇ. 10 ರ ಬಡ್ಡಿಯೊಂದಿಗೆ ಸರ್ಕಾರಕ್ಕೆ ಹಿಂತಿರುಗಿಸುವುದಾಗಿ ಮುಚ್ಚಳಿಕೆ ಬರೆದುಕೊಡತಕ್ಕದ್ದು. ಈ ನಿಯಮ ರಾಜ್ಯ ಅಥವಾ ಕೇಂದ್ರ ಸರ್ಕಾರದಲ್ಲಿ ನೌಕರಿ ದೊರೆತು ಮಧ್ಯದಲ್ಲಿ ಬಿಟ್ಟು ಹೋಗುವವರಿಗೆ ಅನ್ವಯಿಸುವುದಿಲ್ಲ. ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಹಾಕಲು ವರ್ಷದ ಎಲ್ಲಾ ದಿನಗಳು (365 days) ಅವಕಾಶ ಇರುತ್ತದೆ.

ಸತ್ಯ ಮಿಥ್ಯ
ನಿಮ್ಮ ಪ್ರತಿಬಿಂಬ ಕನ್ನಡ ದಿನ ಪತ್ರಿಕೆ

SATY MITHI
Kannada Daily Morning

# ರಕ್ತದಾನಕ್ಕೆ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಮುಂದಾಗಬೇಕು: ಡಾ. ಈಶ್ವರ ಹಸಬಿ

**ಸತ್ಯಮಿಥ್ಯ ಸುದ್ದಿಮೂಲ ಹುಬ್ಬಳ್ಳಿ:**
ಥಲಸ್ಸೆಮಿಯಾ ಹಾಗೂ ಹಿಮೋಫೀಲಿಯಾ ಪೀಡಿತ ಮಕ್ಕಳಿಗಾಗಿ ಕೆಎಂಸಿಆರ್‌ಐ ಆಸ್ಪತ್ರೆಯ ರಕ್ತಕೇಂದ್ರದಲ್ಲಿ ವಿಶೇಷ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರದಲ್ಲಿ ಹಲವು ರಕ್ತದಾನಿಗಳು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು.

ಕಾರ್ಯಕ್ರಮವನ್ನು ಥಲಸ್ಸೆಮಿಯಾ ಕಾಯಿಲೆಯಿಂದ ಸುಮಾರು ಒಂಬತ್ತು ವರ್ಷಗಳಿಂದ ಬಳಲುತ್ತಿರುವ ಕುಮಾರಿ ಸೃಷ್ಟಿ ಸಣ್ಣಗೌಡರ ಅವರಿಂದ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಕೆಎಂಸಿಆರ್‌ಐ ವೈದ್ಯಕೀಯ ಅಧೀಕ್ಷಕ ಡಾ. ಈಶ್ವರ ಹಸಬಿ ಮಾತನಾಡಿ, ಥಲಸ್ಸೆಮಿಯಾ ಸೇರಿದಂತೆ ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ ಮಕ್ಕಳಿಗೆ ನಿಯಮಿತವಾಗಿ ರಕ್ತದ ಅವಶ್ಯಕತೆ ಇರುತ್ತದೆ. ಆದ್ದರಿಂದ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂಪ್ರೇರಿತರಾಗಿ ರಕ್ತದಾನಕ್ಕೆ ಮುಂದಾಗಬೇಕು ಎಂದು ಮನವಿ ಮಾಡಿದರು.

ರಕ್ತನಿಧಿಯ ವೈದ್ಯಾಧಿಕಾರಿ ಡಾ. ಕವಿತಾ ಮಾತನಾಡಿ, ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ 70ಕ್ಕೂ ಅಧಿಕ ಮಕ್ಕಳು ಥಲಸ್ಸೆಮಿಯಾ ಕಾಯಿಲೆಯಿಂದ ಬಳಲುತ್ತಿದ್ದು, ಅವರು ಪ್ರತಿ ತಿಂಗಳು ಚಿಕಿತ್ಸೆ ಪಡೆಯುತ್ತಿದ್ದಾರೆ.




ಇಂತಹ ಮಕ್ಕಳಿಗೆ ಅಗತ್ಯವಿರುವ ರಕ್ತವನ್ನು ಆಸ್ಪತ್ರೆಯ ವತಿಯಿಂದ ವ್ಯವಸ್ಥೆ ಮಾಡಲಾಗುತ್ತಿದೆ. ಇನ್ನೂ ಅನೇಕ ರೋಗಿಗಳಿಗೆ ರಕ್ತದ ಅವಶ್ಯಕತೆ ಇರುವುದರಿಂದ ಸಂಘ–ಸಂಸ್ಥೆಗಳು ಸ್ವಯಂಪ್ರೇರಿತವಾಗಿ ರಕ್ತದಾನ ಶಿಬಿರಗಳನ್ನು ಆಯೋಜಿಸಿದರೆ ರೋಗಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ತಿಳಿಸಿದರು.

ರಕ್ತದಾನಿಗಳಿಗೆ ಕೆಎಂಸಿಆರ್‌ಐ ರಕ್ತಕೇಂದ್ರದಲ್ಲಿ ಅಗತ್ಯವಿರುವ ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದ ಅವರು, ಅರ್ಹರು ರಕ್ತದಾನ ಮಾಡುವ ಮೂಲಕ ಜೀವ ಉಳಿಸುವ ಮಹತ್ವದ ಕಾರ್ಯದಲ್ಲಿ ಕೈಜೋಡಿಸಬೇಕು ಎಂದು ಹೇಳಿದರು.

ಶ್ರಮಜೀವಿ ಆಟೋರಿಕ್ಷಾ ಚಾಲಕರ ಸಂಘದ ಅಧ್ಯಕ್ಷ ಚಿದಾನಂದ ಸವದತ್ತಿ ಮಾತನಾಡಿ, ಸಂಘದ ವತಿಯಿಂದ ಈ ಹಿಂದೆಯೂ ಹಲವು ಬಾರಿ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗಿದೆ. ಆಟೋ ಚಾಲಕರು ಹಾಗೂ ಅವರ ಕುಟುಂಬದ ಸದಸ್ಯರಿಗೆ ಆರೋಗ್ಯ ತಪಾಸಣಾ ಕಾರ್ಯಕ್ರಮಗಳನ್ನುಸಹನಡೆಸಿಕೊಂಡುಬರಲಾಗುತ್ತಿದೆ. ಈ ಅರ್ಥಪೂರ್ಣ ಕಾರ್ಯಕ್ರಮಕ್ಕೆ ಆಹ್ವಾನಿಸಿರುವುದು ಇನ್ನಷ್ಟು ಸಮಾಜಸೇವಾ ಕಾರ್ಯಗಳನ್ನು ಕೈಗೊಳ್ಳಲು ಪ್ರೇರಣೆ ನೀಡಿದೆ. ಮುಂದಿನ ದಿನಗಳಲ್ಲಿ ಸಂಘದ ವತಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಘದ ಸದಸ್ಯರಾದ ಶಬ್ಬೀರ್ ಬಾಗೇವಾಡಿ, ಶಾಬುದ್ದಿನ್ ಧಾರವಾಡ ಸೇರಿದಂತೆ ಹಲವು ಆಟೋ ಚಾಲಕರು ರಕ್ತದಾನ ಮಾಡಿದರು.

ಹುಬ್ಬಳ್ಳಿ ಆಯುರ್ವೇದ ಆಸ್ಪತ್ರೆಯ ಮುಖ್ಯ ವೈದ್ಯರಾದ ಡಾ. ಸಿದ್ದನಗೌಡ ಪಾಟೀಲ ಅವರು ಸಹ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು. ವೈದ್ಯರ ಈ ಸೇವಾ ಮನೋಭಾವಕ್ಕೆ ರಕ್ತದಾನಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಡಾ. ಅನಿಲಕುಮಾರ, ಶ್ರೀ ಜನಕಲ್ಯಾಣ ಶಿಕ್ಷಣ ಹಾಗೂ ಆರೋಗ್ಯ ಸೇವಾ ಸಂಸ್ಥೆಯ ಆನಂದ ಬಡಿಗೇರ, ಹರೀಶ್ ಕುಮಾರ್ ಆರ್. ಸೇರಿದಂತೆ ಹಲವರು ಉಪಸ್ಥಿತರಿದ್ದರು. ಶ್ರಮಜೀವಿ ಆಟೋರಿಕ್ಷಾ ಚಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ಪುಂಡಲಿಕ ಬಡಿಗೇರ ಕಾರ್ಯಕ್ರಮ ನಿರೂಪಿಸಿದರು.

ಶಿಬಿರದಲ್ಲಿಹೆಚ್ಚಿನಸಂಖ್ಯೆಯಲ್ಲಿರಕ್ತದಾನಿಗಳುಭಾಗವಹಿಸಿ ರಕ್ತದಾನ ಮಾಡುವ ಮೂಲಕ ಥಲಸ್ಸೆಮಿಯಾ ಹಾಗೂ ಹಿಮೋಫೀಲಿಯಾ ಪೀಡಿತ ಮಕ್ಕಳಿಗೆ ನೆರವಾದರು ಎಂದು ವಿಠ್ಠಲ್ ಬಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಯಿ ಕಚ್ಚಿದರೆ ನಿರ್ಲಕ್ಷ್ಯ ಬೇಡ; ಜೀವ ಉಳಿಸುವ ಲಸಿಕೆ ಮರೆಯದಿರಿ: ಪಶು ವೈದ್ಯಾಧಿಕಾರಿ ಡಾ. ಎಲ್.ಎಸ್. ಗೌರಿ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
ನಾಯಿ ಅಥವಾ ಇತರೆ ಪ್ರಾಣಿಗಳು ಕಚ್ಚಿದ ಸಂದರ್ಭದಲ್ಲಿ ನಿರ್ಲಕ್ಷ್ಯ ವಹಿಸದೆ ತಕ್ಷಣ ಸೂಕ್ತ ವೈದ್ಯಕೀಯ ಚಿಕಿತ್ಸೆ ಪಡೆಯಬೇಕು. ರೇಬಿಸ್ ಮಾರಕ ರೋಗವಾಗಿದ್ದು, ಮುನ್ನೆಚ್ಚರಿಕೆ ಹಾಗೂ ಸಮಯಕ್ಕೆ ಸರಿಯಾಗಿ ಲಸಿಕೆ ಪಡೆಯುವ ಮೂಲಕ ರೋಗವನ್ನು ತಡೆಗಟ್ಟಬಹುದು ಎಂದು ಪಶು ವೈದ್ಯಾಧಿಕಾರಿ ಡಾ. ಎಲ್.ಎಸ್. ಗೌರಿ ಹೇಳಿದರು.

ಕರ್ನಾಟಕ ಸರ್ಕಾರ, ಜಿಲ್ಲಾ ಪಂಚಾಯತ್ ಗದಗ ಹಾಗೂ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಗದಗ ಇವರ ಸಹಯೋಗದಲ್ಲಿ ನರೇಗಲ್ಲದ ಪಶು ಚಿಕಿತ್ಸಾ ಕೇಂದ್ರದ ವತಿಯಿಂದ ಸಮೀಪದ ಜಕ್ಕಲಿ ಗ್ರಾಮದ ಶ್ರೀ ಅಂದಾನಪ್ಪ ಜ್ಞಾನಪ್ಪ ದೊಡ್ಡಮೇಟಿ ಸರ್ಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ರೇಬಿಸ್ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರೇಬಿಸ್ ಸೋಂಕಿತ ನಾಯಿ, ಬೆಕ್ಕು, ನರಿ, ತೋಳ ಹಾಗೂ ಮುಂಗುಸಿ ಸೇರಿದಂತೆ ಸೋಂಕಿತ ಪ್ರಾಣಿಗಳ ಕಚ್ಚುವಿಕೆ ಅಥವಾ ತರಚುವಿಕೆಯಿಂದ ಮನುಷ್ಯರಿಗೆ ಹರಡಬಹುದು. ಪ್ರಾಣಿಗಳ ಲಾಲಾರಸದ ಮೂಲಕ ವೈರಸ್ ದೇಹವನ್ನು ಪ್ರವೇಶಿಸುವುದರಿಂದ ಪ್ರಾಣಿ ಕಚ್ಚಿದ ಅಥವಾ ತರಚಿದ ಸಂದರ್ಭದಲ್ಲಿ ಗಾಯವನ್ನು ನಿರ್ಲಕ್ಷಿಸಬಾರದು ಎಂದು ತಿಳಿಸಿದರು.

ಪ್ರಾಣಿಗಳಲ್ಲಿನಡವಳಿಕೆಯಲ್ಲಿಹಠಾತ್‌ಬದಲಾವಣೆ,ಆಹಾರ ಸೇವಿಸದಿರುವುದು, ಅತಿಯಾಗಿ ಜೊಲ್ಲು ಸುರಿಸುವುದು ಹಾಗೂ ಪಾರ್ಶ್ವವಾಯು ಸೇರಿದಂತೆ ವಿವಿಧ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಮನುಷ್ಯರಲ್ಲಿ ಜ್ವರ, ತಲೆನೋವು, ಕಚ್ಚಿದ ಸ್ಥಳದಲ್ಲಿ ಜುಮ್ಮೆನಿಸುವಿಕೆ, ನೀರು ಹಾಗೂ ಗಾಳಿಗೆ ಹೆದರುವಿಕೆ ಮುಂತಾದ ಲಕ್ಷಣಗಳು ಕಂಡುಬರಬಹುದು ಎಂದು ವಿವರಿಸಿದರು.

ನಾಯಿ ಅಥವಾ ಇತರೆ ಪ್ರಾಣಿಗಳು ಕಚ್ಚಿದ ತಕ್ಷಣ ಗಾಯವನ್ನು ಕನಿಷ್ಠ 15 ನಿಮಿಷಗಳ ಕಾಲ ಸಾಬೂನು ಹಾಗೂ ಹರಿಯುವ ನೀರಿನಿಂದ ಚೆನ್ನಾಗಿ ತೊಳೆಯಬೇಕು. ಗಾಯಕ್ಕೆ ಯಾವುದೇ ದೇಶಿ ಔಷಧಿ, ಮಣ್ಣು, ಎಣ್ಣೆ ಅಥವಾ ಇತರೆ ಪದಾರ್ಥಗಳನ್ನು ಹಚ್ಚಬಾರದು. ಕೂಡಲೇ ವೈದ್ಯರನ್ನು ಸಂಪರ್ಕಿಸಿ ಅಗತ್ಯವಿರುವ ರೇಬಿಸ್ ಲಸಿಕೆ ಹಾಗೂ ವೈದ್ಯಕೀಯ ಚಿಕಿತ್ಸೆ ಪಡೆಯಬೇಕು ಎಂದು ಸಲಹೆ ನೀಡಿದರು.

ಸಾಕು ನಾಯಿಗಳು ಹಾಗೂ ಬೆಕ್ಕುಗಳಿಗೆ ನಿಯಮಿತವಾಗಿ ರೇಬಿಸ್ ಲಸಿಕೆ ಹಾಕಿಸುವುದು ಅತ್ಯಗತ್ಯ. ಮಕ್ಕಳು ಬೀದಿ ನಾಯಿಗಳನ್ನು ಕೆಣಕುವುದು, ಅವುಗಳೊಂದಿಗೆ ಆಟವಾಡುವುದು ಅಥವಾ ಪರಿಚಯವಿಲ್ಲದ ಪ್ರಾಣಿಗಳನ್ನು ಮುಟ್ಟುವುದನ್ನು ತಪ್ಪಿಸಬೇಕು. ಪ್ರಾಣಿಗಳೊಂದಿಗೆ ಸುರಕ್ಷಿತ ಅಂತರ ಕಾಯ್ದುಕೊಳ್ಳುವ ಕುರಿತು ಮಕ್ಕಳಲ್ಲಿ ಅರಿವು ಮೂಡಿಸುವುದು ಅಗತ್ಯ ಎಂದರು.

ರೇಬಿಸ್‌ನ ಲಕ್ಷಣಗಳು ಕಾಣಿಸಿಕೊಂಡ ಬಳಿಕ ಚಿಕಿತ್ಸೆ ಕಷ್ಟಸಾಧ್ಯವಾಗಿರುವುದರಿಂದ, ಪ್ರಾಣಿ ಕಚ್ಚಿದ ಕೂಡಲೇ ವೈದ್ಯಕೀಯ ಸಲಹೆ ಪಡೆದು ಅಗತ್ಯ ಲಸಿಕೆ ಪಡೆಯುವುದೇ ರೋಗ ತಡೆಗಟ್ಟುವ ಪ್ರಮುಖ ಮಾರ್ಗವಾಗಿದೆ. ರೇಬಿಸ್ ನಿಯಂತ್ರಣಕ್ಕೆ ಜನಜಾಗೃತಿ, ಪ್ರಾಣಿಗಳ ಲಸಿಕಾಕರಣ ಹಾಗೂ ಆರೋಗ್ಯ ಮತ್ತು ಪಶುಸಂಗೋಪನಾ ಇಲಾಖೆಗಳ ಸಮನ್ವಯ ಅಗತ್ಯ ಎಂದು ಡಾ. ಗೌರಿ ಹೇಳಿದರು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಶಿಕ್ಷಕಿ ಶಾರದಾ ಎಂ., ಶಿಕ್ಷಕರಾದ ವಿ.ವಿ. ಅಣ್ಣಿಗೇರಿ, ಆರ್.ಡಿ. ಬಡಿಗೇರ ಸೇರಿದಂತೆ ಶಿಕ್ಷಕರ ವೃಂದ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.




# ಶಿಕ್ಷಣದ ಜತೆಗೆ ಸಂಸ್ಕಾರವೂ ಮಕ್ಕಳ ಬದುಕಿನ ಆಸ್ತಿ: ಮುಪ್ಪಿನ ಬಸವಲಿಂಗ ಸ್ವಾಮೀಜಿ ಸಲಹೆ

**ಸತ್ಯಮಿಥ್ಯ ಸುದ್ದಿಮೂಲ ನರೇಗಲ್ಲ :**
"ಇಂದಿನವಿದ್ಯಾರ್ಥಿಗಳೇನಾಳಿನಗ್ರಾಮದಹಾಗೂಸಮಾಜದಜವಾಬ್ದಾರಿಯುತ ನಾಗರಿಕರು. ಮಕ್ಕಳಲ್ಲಿ ಸತ್ಯ, ನೀತಿ, ಪ್ರಾಮಾಣಿಕತೆ, ಗುರು□ಹಿರಿಯರಿಗೆ ಗೌರವ ಹಾಗೂ ಕೃತಜ್ಞತಾ ಭಾವ ಬೆಳೆಸುವುದು ಅತ್ಯಗತ್ಯ" ಎಂದು ಹಾಲಕೆರೆ□ ಗಂಜಿಹಾಳ ಅನ್ನದಾನೇಶ್ವರ ಸಂಸ್ಥಾನ ಮಠದ ಜಗದ್ಗುರು ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು ಹೇಳಿದರು.

ಸಮೀಪದ ಹಾಲಕೆರೆ ಗ್ರಾಮದ ಆರ್‌ಎಂಎಸ್‌ಎ ಪ್ರೌಢಶಾಲೆ, ಸರ್ಕಾರಿ ಕನ್ನಡ ಗಂಡುಮಕ್ಕಳ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಕನ್ನಡ ಹೆಣ್ಣುಮಕ್ಕಳ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಜಿಲ್ಲಾ ಪಂಚಾಯತ ಗದಗ, ಶಾಲಾ ಶಿಕ್ಷಣ ಇಲಾಖೆ ಹಾಗೂ ಅನ್ನದಾನೇಶ್ವರ ಸಂಸ್ಥಾನ ಮಠದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮೌಲ್ಯ ಶಿಕ್ಷಣ ಅನುಷ್ಠಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಲ್ಲಿ ಒಳ್ಳೆಯತನ, ಗುರು□ಹಿರಿಯರಿಗೆ ಗೌರವ, ಕಲಿಸಿದ ಗುರುಗಳ ಬಗ್ಗೆ ಕೃತಜ್ಞತೆ ಹಾಗೂ ಸಮಾಜದ ಋಣ ತೀರಿಸುವ ಮನೋಭಾವ ಬೆಳೆಸಿದಾಗ ಗ್ರಾಮದಲ್ಲಿ ಉತ್ತಮ ಹಾಗೂ ಸುಸಂಸ್ಕೃತ ವಾತಾವರಣ ನಿರ್ಮಾಣವಾಗುತ್ತದೆ. ಶಿಕ್ಷಣದ ಜತೆಗೆ ಮಕ್ಕಳಲ್ಲಿ ಸಂಸ್ಕಾರ ಮತ್ತು ಜೀವನ ಮೌಲ್ಯಗಳನ್ನು ಬೆಳೆಸುವುದು ಕುಟುಂಬ, ಶಾಲೆ ಹಾಗೂ ಸಮಾಜದ ಎಲ್ಲರ ಜವಾಬ್ದಾರಿಯಾಗಿದೆ ಎಂದರು.

ಮೌಲ್ಯಶಿಕ್ಷಣಕ್ಕೆಮಾತ್ರಸೀಮಿತವಾಗದೆ,ಮೂರುಶಾಲೆಗಳಮಕ್ಕಳಿಗೆಅಗತ್ಯವಿರುವ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲು ಮಠ ಮುಂದೆಯೂ ಸಹಕರಿಸಲಿದೆ. ಗ್ರಾಮದ ಹಿರಿಯರು ಹಾಗೂ ಶಿಕ್ಷಕರ ಸಹಕಾರದೊಂದಿಗೆ ಮೂರು ಶಾಲೆಗಳನ್ನು ಆದರ್ಶ ಶಾಲೆಗಳನ್ನಾಗಿ ರೂಪಿಸುವುದು ಮಠದ ಉದ್ದೇಶವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್. ಬುರಡಿ ಮಾತನಾಡಿ, ಶಾಲೆಗಳ ಅಭಿವೃದ್ಧಿ ಹಾಗೂ ಮಕ್ಕಳಲ್ಲಿ ಸಂಸ್ಕಾರ ಮತ್ತು ಮೌಲ್ಯಗಳನ್ನು ಬೆಳೆಸುವ ಕುರಿತು ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು ಹೊಂದಿರುವ ಕಾಳಜಿ ಮತ್ತು ದೂರದೃಷ್ಟಿ ಶ್ಲಾಘನೀಯ. ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಮಠದ ಮಾರ್ಗದರ್ಶನ ಹಾಗೂ ಸಹಕಾರ ಶಿಕ್ಷಣ ಇಲಾಖೆಗೆ ಮತ್ತಷ್ಟು ಬಲ ನೀಡಲಿದೆ ಎಂದರು.

ಈ ಸಂದರ್ಭದಲ್ಲಿ ಮೂರು ಶಾಲೆಗಳಿಗೂ ಮಠದ ವತಿಯಿಂದ ಮೌಲ್ಯ ಶಿಕ್ಷಣಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ವಿತರಿಸಲಾಯಿತು. 2025□26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಪ್ರೌಢಶಾಲೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಶಾಲಾ ಮಕ್ಕಳಿಂದ ಮೌಲ್ಯ ಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ಚಟುವಟಿಕೆಗಳು ಹಾಗೂ ಪ್ರಾತ್ಯಕ್ಷಿಕೆಗಳು ಪ್ರದರ್ಶನಗೊಂಡವು.

ಕಾರ್ಯಕ್ರಮದವೇದಿಕೆಯಲ್ಲಿಶಾಲಾಅಭಿವೃದ್ಧಿಮತ್ತುಮೇಲ್ವಿಚಾರಣಾಸಮಿತಿಯ ಅಧ್ಯಕ್ಷರಾದ ಅಂದಪ್ಪ ಕುರಿ, ದೇವೇಂದ್ರಪ್ಪ ಕಡೆಮನಿ, ಮುಖ್ಯೋಪಾಧ್ಯಾಯರಾದ ಎಸ್.ಬಿ. ಸಂಕಣ್ಣವರ, ಬಿ.ಆಯ್. ಹಿರೇಹಾಳ ಹಾಗೂ ಸಾವಿತ್ರಮ್ಮ ಚುಂಚಾ, ಸದಸ್ಯೆ ಅನ್ನಪೂರ್ಣ ಬಾರಡ್ಡಿ ಉಪಸ್ಥಿತರಿದ್ದರು.

ಗ್ರಾಮದ ಹಿರಿಯರಾದ ಅಂದಾನಗೌಡ ಪಾಟೀಲ, ಎ.ಸಿ. ಪಾಟೀಲ, ಗಿರೀಶಗೌಡ ಪಾಟೀಲ, ವೀರಣ್ಣ ಹಳ್ಳಿ, ಶರಣಪ್ಪ ಬೆಟಗೇರಿ, ಅಶೋಕ ಮಾಳಗೌಡ, ಬಸವರಾಜ ಹೊನವಾಡ, ಶರಣಪ್ಪ ಕರಮುಡಿ, ಮಂಜುನಾಥ ಬುರಡಿ, ಮಹೇಶ ಕುರಿ, ಚಂದ್ರು ಮುಂದಿನಮನಿ, ಬಿ.ಸಿ. ಮೇಟಿ, ಈಶ್ವರಯ್ಯ ರುದ್ರಾಕ್ಷಿಮಠ, ರಮೇಶ ಬೈರಗೊಂಡ, ರಮೇಶ ಬನ್ನಿಗಿಡದ ಸೇರಿದಂತೆ ಎಸ್‌ಡಿಎಂಸಿ ಸದಸ್ಯರು ಹಾಗೂ ಶಿಕ್ಷಕ ವೃಂದದವರು ಪಾಲ್ಗೊಂಡಿದ್ದರು.

ಅನ್ನದಾನ ವಿಜಯ ಬಾಲಕಿಯರ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಸ್.ಎನ್. ಹೂಲಗೇರಿ, ಅನ್ನದಾನ ವಿಜಯ ಬಾಲಕರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಎಂ.ಬಿ. ಸಜ್ಜನರ, ಶಿಕ್ಷಕ ಎಸ್.ಬಿ. ಬೂದಿಹಾಳ, ಉಪನ್ಯಾಸಕ ಎಫ್.ಎನ್. ಹುಡೇದ, ಸಿಆರ್‌ಪಿ ಶಿವು ಮುತ್ತಣ್ಣವರ ಸೇರಿದಂತೆ ಹಲವರು ಭಾಗವಹಿಸಿದ್ದರು. ಜಗದೀಶ್ ಕಾರ್ಯಕ್ರಮ ನಿರೂಪಿಸಿದರು. ಕಾಲವಾಡ ವಂದಿಸಿದರು.



# ಅರಸನಾಳದಲ್ಲಿ ಸಂಭ್ರಮದ ಶ್ರೀ ಷಣ್ಮುಖೇಶ್ವರ ರಥೋತ್ಸವ

**ಸತ್ಯಮಿಥ್ಯ ಸುದ್ದಿಮೂಲ ಮುದ್ದೇಬಿಹಾಳ:**
ತಾಲ್ಲೂಕಿನ ಅರಸನಾಳ ಗ್ರಾಮದ ಇತಿಹಾಸ ಪ್ರಸಿದ್ಧ ಶ್ರೀ ಷಣ್ಮುಖೇಶ್ವರ ದೇವಸ್ಥಾನದ ವರ್ಷಿಕ ರಥೋತ್ಸವವು ಸೋಮವಾರ (ಸಪ್ಟೆಂಬರ್ 21) ಅತ್ಯಂತ ಶ್ರದ್ಧಾ–ಭಕ್ತಿ ಹಾಗೂ ವೈಭವದಿಂದ ನೆರವೇರಿತು. ಸಾವಿರಾರು ಸದ್ಭಕ್ತರ ಹರ್ಷೋದ್ಗಾರದ ನಡುವೆ ಸಂಜೆ 6 ಗಂಟೆಗೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ರಥೋತ್ಸವದ ನಿಮಿತ್ತ ಶ್ರೀ ಷಣ್ಮುಖೇಶ್ವರ ದೇವಸ್ಥಾನದಮಹಾರಥವನ್ನುಬಣ್ಣಬಣ್ಣದ ಹೂವುಗಳು, ಕಣ್ಮನ ಸೆಳೆಯುವ ರುದ್ರಾಕ್ಷಿ ಹಾರ ಹಾಗೂ ಬೃಹತ್ ಕೇಸರಿ ಧ್ವಜಗಳಿಂದ ಅದ್ಧೂರಿಯಾಗಿ ಅಲಂಕರಿಸಲಾಗಿತ್ತು. ದೇವಸ್ಥಾನದ ಮುಂಭಾಗದಿಂದ ಹೊರಟ ಮಹಾರಥವು, 200 ಮೀಟರ್ ದೂರದಲ್ಲಿರುವ ಪಾದಗಟ್ಟೆಯವರೆಗೆ ಭಕ್ತರ ಜಯಘೋಷಗಳೊಂದಿಗೆ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಸುಗಮವಾಗಿ ಸಾಗಿಬಂತು.

ಮೆರವಣಿಗೆ ಹಾಗೂ ಭಕ್ತರ ಸೇವೆ:
ರಥೋತ್ಸವಕ್ಕೂ ಮುನ್ನ ತೇರಿನ ಮೀಣಿ (ಬೃಹತ್‌ಹಗ್ಗ) ಮತ್ತು ಕಳಶವನ್ನು ಪ್ರಮುಖ ಬೀದಿಗಳಲ್ಲಿ ಕರಡಿ ಮಜಲು ಹಾಗೂ ಮಂಗಳವಾದ್ಯಗಳೊಂದಿಗೆ ಅದ್ಧೂ–ರಿಯಾಗಿ ಮೆರವಣಿಗೆ ಮಾಡಲಾಯಿತು. ತೇರು ಎಳೆಯುವ ವೇಳೆ ಸಾವಿರಾರು ಭಕ್ತರು ಉತ್ತತ್ತಿ ಮತ್ತು ಬಾಳೆಹಣ್ಣುಗಳನ್ನು ರಥಕ್ಕೆ ಎಸೆದು ತಮ್ಮ ಹರಕೆ ತೀರಿಸಿ, ಭಕ್ತಿ ಸಮರ್ಪಿಸಿದರು. ಕರಡಿ ಮಜಲು, ಬ್ಯಾಂಡ್ ಬಾಜಾ ಸೇರಿದಂತೆ ನಾನಾ ಜಾನಪದ ಕಲಾಮೇಳಗಳು ರಥೋತ್ಸವಕ್ಕೆ ಮೆರುಗು ನೀಡಿದವು.

ಗ್ರಾಮ ಸೇರಿದಂತೆ ಸುತ್ತಮುತ್ತಲಿನ ವಿವಿಧ ಹಳ್ಳಿಗಳಿಂದ ಆಗಮಿಸಿದ್ದ ಅಪಾರ ಸಂ–ಖ್ಯೆಯ ಭಕ್ತಾದಿಗಳಿಗೆ ಸೂಕ್ತ ಅನುಕೂಲ ಮಾಡಿಕೊಡಲಾಗಿತ್ತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೋಲಿಸ್ ಇಲಾಖೆಯಿಂದ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.



# ಜಿಲ್ಲಾ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿ: ವಿಶ್ವಾರಾಧ್ಯ, ಸಮರ್ಥ ಮೊದಲ ಸ್ಥಾನ

**ಸತ್ಯಮಿಥ್ಯ ಸುದ್ದಿಮೂಲ ಗಜೇಂದ್ರಗಡ:**
ಗದಗ ಜಿಲ್ಲಾ ಮಟ್ಟದಲ್ಲಿ ನಡೆದ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಕೊಡಗಾನೂರಿನ ಓಂ ಶ್ರೀ ಸಾಯಿ ಇಂಗ್ಲಿಷ್ ಮೀಡಿಯಂ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ.

ಶಾಲೆಯ ವಿದ್ಯಾರ್ಥಿಗಳಾದ ವಿಶ್ವಾರಾಧ್ಯ ಪ್ರಭುರಾಜ ಹಿರೇಮಠ ಮತ್ತು ಸಮರ್ಥ ಬಸವರಾಜ ಸಂಕನೂರ ಅವರು ಅತ್ಯುತ್ತಮ ಕ್ರೀಡಾಪಟುತ್ವ ಹಾಗೂ ಕಠಿಣ ಪರಿಶ್ರಮದಿಂದ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಪ್ರಥಮ ಬಹುಮಾನ ಪಡೆದುಕೊಂಡಿದ್ದು, ಮುಂದಿನ ವಿಭಾಗ ಮಟ್ಟದ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ. ಸಾಧನೆಗೈದ ವಿದ್ಯಾರ್ಥಿಗಳಿಗೆ ಶಾಲೆಯ ಆಡಳಿತ ಮಂಡಳಿ, ಶಿಕ್ಷಕ ವೃಂದ,ಪಾಲಕರು ಹಾಗೂ ಸಿಬ್ಬಂದಿ ಅಭಿನಂದನೆಗಳನ್ನು ಸಲ್ಲಿಸಿ, ಮುಂದಿನ ಪಂದ್ಯಾವಳಿಗಳಲ್ಲಿ ಇನ್ನಷ್ಟು ಯಶಸ್ಸು ಸಿಗಲಿ ಎಂದು ಹಾರೈಸಿದ್ದಾರೆ.



SATYAMITHI KANNADA DAILY MORNING OWNER, PUBLISHER, BY: CHANNAVEERAPPA NINGAPPA SAMAGANDI PUBLISHED FROM: KELAGAL{ETH, NEAR BASAVESHWAR DEVASTAN, HOME NO. 169, WARD NO, 4 MAIN ROAD GAJEDRAGAD, GADAG KARNATAKA - 582114 PRINTED AT: MAILARALINGESHWAR PRINTERS, WARD NO, 3, SUDI TQ, GAJENDRAGAD, GADAG, KARNATAKA- 582114